ಯಕ್ಷಗಾನ

ಅಮರಸೇನಾಧಿಪತ್ಯ





ರಜತೋತ್ಸವ ಸಮಿತಿ ಪ್ರಕಾಶನ - ಉಪ್ಪಿನಂಗಡಿ

ಕಥಾ ಸಾರಾಂಶ

ಶ್ರೀಮನ್ನಾರಾಯಣನ ಸಹಾಯವಿಲ್ಲದೆ ರಾಕ್ಷಸರನ್ನು ಗೆಲ್ಲುವುದು ಸಾಧ್ಯವಾಗುವಂತೆ ಈಶ್ವರಾನುಗ್ರಹದಿಂದ ಸಮರ್ಥ ಸೇನಾನಿಯೊಬ್ಬ ನನ್ನು ಪಡೆಯಬೇಕೆಂಬಂತೆ ಕೈಲಾಸದತ್ತ ಹೊರಟ ದೇವೇಂದ್ರ ಮಾನಸಾರಣ್ಯದಲ್ಲಿ ಕೇಶಿ ಎಂಬ ದಾನವನಿಂದ ಪ್ರಜಾಪತಿ ಬ್ರಹ್ಮನ ಮಗಳಾದ ಸುರಸೇನೆಯನ್ನು ರಕ್ಷಿಸುತ್ತಾನೆ. ಸುರಸೇನೆಯು ತ್ರಿಮೂರ್ತಿಗಳಿಗೂ ದುರ್ಜಯನೆನಿಸಿದ ವರನನ್ನು ಹುಡುಕಿ ತನಗೆ ಮದುವೆ ಮಾಡುವಂತೆ ಇಂದ್ರನನ್ನು ಕೇಳಿ ಕೊಳ್ಳುತ್ತಾಳೆ. ದೇವೇಂದ್ರ ಈ ಕುರಿತು ಬ್ರಹ್ಮನನ್ನು ಕೇಳಿಕೊಂಡಾಗ ಬ್ರಹ್ಮನು ಈಕೆಗೆ ಪತಿಯಾಗುವವನೂ, ನಿನ್ನ ಸೈನ್ಯಕ್ಕೆ ಸೇನಾಧಿಪತಿಯಾಗುವವನೂ ಸದ್ಯದಲ್ಲೇ ಹುಟ್ಟಲಿದ್ದಾನೆ ಎನ್ನುತ್ತಾನೆ. ಈಶ್ವರನೂ ತಥಾಸ್ತು ಎನ್ನುತ್ತಾ ಹರಸುತ್ತಾನೆ. ಈ ಸಂದರ್ಭದಲ್ಲಿ ಇಂದ್ರಾದಿಗ್ಭಾಗದಲ್ಲಿ ಬ್ರಹ್ಮರ್ಷಿಗಳಿಂದ ಯಜ್ಞವೊಂದು ನಡೆಯುತ್ತಿರುತ್ತದೆ. ಅಲ್ಲಿಗೆ ಹೋದಂತಹ ದೇವೇಂದ್ರಾದಿಗಳಿಗೆ ಹವಿಸ್ಸುಗಳನ್ನು ಒಪ್ಪಿಸಿದ ಅದ್ಭುತಾಗ್ನಿಯು ಬ್ರಹ್ಮರ್ಷಿಯರ ಮಡದಿಯರನ್ನು ನೋಡಿ ಅವರ ಅಂದಕ್ಕೆ ಮರುಳಾಗುತ್ತಾನೆ. ಇಲ್ಲಿಯೇ ಇದ್ದರೆ ಒಂದಲ್ಲ ಒಂದು ದಿನ ಇವರನ್ನು ಕೂಡಲು ಸಾಧ್ಯವಾದೀತೆಂದು ಯೋಚಿಸಿದ ಅಗ್ನಿಯು ಅಲ್ಲೇ ಉಳಿಯುತ್ತಾನೆ.

ಈ ಹಿಂದೆ ಅಗ್ನಿಯನ್ನು ಕಂಡು ಮೋಹಿತಳಾಗಿ, ಅಗ್ನಿಯಿಂದ ತಿರಸ್ಕರಿಸಲ್ಪಟ್ಟ ದಕ್ಷನ ಮಗಳು ಸ್ವಾಹೆಯು ಯಾವ ರೀತಿಯಿಂದಲಾದರೂ ಅಗ್ನಿಯನ್ನು ಹೊಂದಬೇಕೆಂಬಂತೆ ಅಗ್ನಿಯ ಹಿಂದೆ ಬಿದ್ದಿರುತ್ತಾಳೆ. ಅಗ್ನಿಯು ಮುನಿಸತಿಯರಲ್ಲಿ ಮೋಹಿತನಾದ ವಿಚಾರ ಆಕೆಗೆ ತಿಳಿದುಬಿಡುತ್ತದೆ. ಇಷ್ಟರಲ್ಲಿ ಮುನಿ ಸತಿಯರು ದುರ್ಲಭರೆಂಬುದನ್ನು ತಿಳಿದ ಅಗ್ನಿಗೆ ಜೀವ ಭಾರವೆನ್ನಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂಬಂತೆ ಕಾಡಿನತ್ತ ನಡೆಯುತ್ತಾನೆ. ಸ್ವಾಹೆಯು ಈ ಸಂದರ್ಭವನ್ನೇ ಉಪಯೋಗಿಸಿಕೊಳ್ಳುತ್ತಾಳೆ. ತಾನು ಮುನಿ ಸತಿಯರ ವೇಷದಿಂದ ಅಗ್ನಿಯನ್ನು ಕೂಡುತ್ತಾಳೆ. ಆದರೆ ಅಗ್ನಿ ವೀರ್ಯವನ್ನು ತಾನು ಗರ್ಭದಲ್ಲಿ ಧರಿಸಿಕೊಳ್ಳುವುದಿಲ್ಲ. ಅದನ್ನು ಶ್ವೇತ ಪರ್ವತ ದಲ್ಲಿರುವ ಒಂದು ಕುಂಡದಲ್ಲಿ ಇರಿಸುತ್ತಾಳೆ. ಇದು ಆರು ಬಾರಿ ನಡೆಯುತ್ತದೆ.

ಶ್ವೇತಪರ್ವತವು ಹರನ ವೀರ್ಯದ ರಾಶಿಯಾದುದರಿಂದ ಅಲ್ಲಿ ಸಂಗ್ರಹಿಸಲ್ಪಟ್ಟ ಅಗ್ನಿ ವೀರ್ಯವು ಆರು ಮುಖವುಳ್ಳ ಮಗುವಾಗಿ ಎದ್ದು ನಿಲ್ಲುತ್ತದೆ. ವಿಶ್ವಾಮಿತ್ರನಿಂದ ಸ್ಕಂಧನೆಂದೂ ಗುಹನೆಂದೂ ಕರೆಯಲ್ಪಟ್ಟು ಷಣ್ಮುಖನು ಮುಂದೆ ಅಮರ ಸೇನೆಗೆ ಅಧಿಪತಿಯಾಗುತ್ತಾನೆ.

ಯಕ್ಷಗಾನ

ಅಮರಸೇನಾಧಿಪತ್ಯ

ಲೇಖಕ :

ಹೆಚ್. ನಾರಾಯಣ ರಾವ್

ಅರ್ಪಣೆ :

ಜನನಿ-ಜನಕರ ಅಡಿದಾವರೆ ಗಳಿಗೆ

ಪ್ರಕಾಶಕರು :

ರಜತೋತ್ಸವ ಸಮಿತಿ ಪ್ರಕಾಶನ

ಶ್ರೀ ಕಾಳಿಕಾಂಬಾ ಯಕ್ಷಗಾನ ಕಲಾ ಸೇವಾ ಸಂಘ - ಉಪ್ಪಿನಂಗಡಿ

ದ.ಕ. 574 241

YAKSAGĀNA AMARASĒNĀDHIPATHYA

By : H. Narayana Rao

Published by : Rajathothsava Samithi Prakashana
Uppinangady D.K. 574 241

First Impression : 2000/500

Pages : 32

© : Author

Cover Design : Divakar Gerukatte,
Harishchandra Acharya

Price : 25-00

Printed at : Shreenidhi Offset Printers
V.C. College Road,
Nehru Nagar, Puttur - 574 203, D.K.
Phone : 21272

ಮುನ್ನುಡಿ

ಅಮೃತ ಸೋಮೇಶ್ವರ
ನಿವೃತ್ತ ಪ್ರಾಧ್ಯಾಪಕ
'ಒಲುಮೆ' ಅಡ್ಕ,
ಅಂಚೆ : ಕೋಟೆಕಾರು (ದ.ಕ.) 574152
Ph. 467755

ಶ್ರೀ ಎಚ್. ನಾರಾಯಣ ರಾಯರ 'ಅಮರ ಸೇನಾಧಿಪತ್ಯ' ಎಂಬ ಪೌರಾಣಿಕ ಯಕ್ಷಗಾನ ಪ್ರಸಂಗಕ್ಕೆ ಮುನ್ನುಡಿಯಾಗಿ ಎರಡು ಮಾತು ಬರೆಯಲು ಹರ್ಷಪಡುತ್ತೇನೆ.

ಕನ್ನಡ ವಾಙ್ಮಯ ಪ್ರಪಂಚದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಯಕ್ಷಗಾನವೂ ಒಂದು ಸಮೃದ್ಧ ಪ್ರಕಾರವಾಗಿದೆ. ಕಳೆದ ಸುಮಾರು ನಾಲ್ಕು ಶತಕಗಳಲ್ಲಿ ಸಾವಿರಾರು ಯಕ್ಷಗಾನ ಕೃತಿಗಳು ರಚಿತವಾಗಿವೆ. ಅವುಗಳಲ್ಲಿ ಹಲವು ಕೃತಿಗಳು ರಂಗಸ್ಥಳದಲ್ಲೂ ಮೆರೆದಿವೆ. ಇತ್ತೀಚೆಗಿನ ಒಂದೆರಡು ದಶಕಗಳಲ್ಲಿ ಕೂಡಾ ಮತ್ತೆ ಪ್ರಸಂಗ ರಚನೆಗೆ ಮರುಸುಗ್ಗಿ ಬಂದಿದೆ. ಇದಕ್ಕೆ ಯಕ್ಷಗಾನದ ಇತ್ತೀಚೆಗಿನ ವ್ಯಾಪಾರೀಕರಣ ಸ್ಥಿತಿಯೂ ಕಾರಣವಾಗಿದೆ. ಹಿಂದಿನ ಹಾಗೂ ಇಂದಿನ ಪ್ರಸಂಗ ಕೃತಿಗಳಲ್ಲಿ ಸಾಹಿತ್ಯಿಕ ಮೌಲ್ಯ ಇರುವ ಕೃತಿಗಳು ಕಡಿಮೆ ಎಂದೇ ಹೇಳಬೇಕು. ಕಡಿಮೆಯಾದರೂ ಅವುಗಳನ್ನು ಕಡೆಗಣಿಸುವಂತಿಲ್ಲ.

ಕನ್ನಡದ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಯಕ್ಷಗಾನ ಸಾಹಿತ್ಯವನ್ನೇ ಬಹುಮಟ್ಟಿಗೆ ಉಪೇಕ್ಷಿಸಲಾಗಿದೆ ಎನ್ನಬೇಕು ಯಾವ ದೃಷ್ಟಿಯಿಂದ ನೋಡಿದರೂ ಯಕ್ಷಗಾನ ಸಾಹಿತ್ಯವು ಉತ್ಕೃಷ್ಟ ರೀತಿಯಾದುದು ಎನ್ನಬೇಕಾಗುತ್ತದೆ. ರಾಗತಾಳ ಬದ್ಧವಾಗಿ ನೃತ್ಯಕ್ಕೆ ಒದಗುವ ಗೇಯ ರೂಪದ ಈ ಕಾವ್ಯ ಯಕ್ಷಗಾನ ದೃಶ್ಯಪ್ರಯೋಗಕ್ಕೆ ಆಧಾರವಾಗಿರುವ ವಿವಿಧ ರಸಭಾವ ಸಮನ್ವಿತವಾದ ಸಾಹಿತ್ಯ ಪ್ರಕಾರವಾಗಿದೆ. ಇದರ ರಚನೆಯೂ ಸುಲಭ ಸಾಧ್ಯವಿಲ್ಲ. ಅದಕ್ಕೆ ಪ್ರತ್ಯೇಕವಾದೊಂದು ಪರಿಣತಿ ಬೇಕಾಗುತ್ತದೆ.

ಶ್ರೀ ನಾರಾಯಣ ರಾಯರು ಯಕ್ಷಗಾನ ಕಲೆಯಲ್ಲಿ ಪಳಗಿದವರು. ಸುಂದರವಾದ ಈ ಕೃತಿ ಸಾಂಪ್ರದಾಯಿಕ ಚೌಕಟ್ಟಿನಲ್ಲಿದ್ದು ಪ್ರಯೋಗಕ್ಕೆ ಯುಕ್ತವಾಗಿದೆ. ಆಟಕ್ಕೂ, ಕೂಟಕ್ಕೂ ಬೇಕಾಗುವಷ್ಟು ಪಾತ್ರಗಳು ಈ ಕಥಾನಕದಲ್ಲಿವೆ. ಯಕ್ಷಗಾನದ ರಮ್ಯಾದ್ಭುತ ಸ್ವರೂಪದಲ್ಲಿ ಬಿಂಬಿಸತಕ್ಕ ಪಾತ್ರಗಳ ವೈವಿಧ್ಯವೂ ಇಲ್ಲಿದೆ.

ದೃಶ್ಯ ಸಂಯೋಜನೆಯೂ, ಭಾಷಾ ಸೌಷ್ಠವವೂ ಸೊಗಸಾಗಿದೆ ನಾನಾ ಬಗೆಯ ಛಂದೋಬಂಧಗಳನ್ನು ಕವಿ ಇಲ್ಲಿ ಪ್ರಯೋಗಿಸಿದ್ದಾರೆ.

ಈ ಸೊಗಸಾದ ಕೃತಿಗಾಗಿ ಪ್ರಸಂಗಕಾರರನ್ನು ಅಭಿನಂದಿಸುತ್ತಾ ಈ ಕ್ಷೇತ್ರಕ್ಕೆ ಇನ್ನೂ ಬೆಲೆಯುಳ್ಳ ಕೊಡುಗೆಗಳನ್ನು ಶ್ರೀಯುತರು ನೀಡಲೆಂದು ಹಾರೈಸುತ್ತೇನೆ.

'ಒಲುಮೆ' ಕೋಟೆಕಾರು — ಅಮೃತ ಸೋಮೇಶ್ವರ
3-1-2000

YAKSAGĀNA AMARASĒNĀDHIPATHYA

By : H. Narayana Rao

Published by : Rajathothsava Samithi Prakashana
Uppinangady D.K. 574 241

First Impression : 2000/500

Pages : 32

© : Author

Cover Design : Divakar Gerukatte,
Harishchandra Acharya

Price : 25-00

Printed at : Shreenidhi Offset Printers
V.C. College Road,
Nehru Nagar, Puttur - 574 203, D.K.
Phone : 21272

ಮುನ್ನುಡಿ

ಅಮೃತ ಸೋಮೇಶ್ವರ
ನಿವೃತ್ತ ಪ್ರಾಧ್ಯಾಪಕ
'ಒಲುಮೆ' ಅಡ್ಕ,
ಅಂಚೆ : ಕೋಟೆಕಾರು (ದ.ಕ.) 574152
Ph. 467755

ಶ್ರೀ ಎಚ್. ನಾರಾಯಣ ರಾಯರ 'ಅಮರ ಸೇನಾಧಿಪತ್ಯ' ಎಂಬ ಪೌರಾಣಿಕ ಯಕ್ಷಗಾನ ಪ್ರಸಂಗಕ್ಕೆ ಮುನ್ನುಡಿಯಾಗಿ ಎರಡು ಮಾತು ಬರೆಯಲು ಹರ್ಷಪಡುತ್ತೇನೆ.

ಕನ್ನಡ ವಾಙ್ಮಯ ಪ್ರಪಂಚದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಯಕ್ಷಗಾನವೂ ಒಂದು ಸಮೃದ್ಧ ಪ್ರಕಾರವಾಗಿದೆ. ಕಳೆದ ಸುಮಾರು ನಾಲ್ಕು ಶತಕಗಳಲ್ಲಿ ಸಾವಿರಾರು ಯಕ್ಷಗಾನ ಕೃತಿಗಳು ರಚಿತವಾಗಿವೆ. ಅವುಗಳಲ್ಲಿ ಹಲವು ಕೃತಿಗಳು ರಂಗಸ್ಥಳದಲ್ಲೂ ಮೆರೆದಿವೆ. ಇತ್ತೀಚೆಗಿನ ಒಂದೆರಡು ದಶಕಗಳಲ್ಲಿ ಕೂಡಾ ಮತ್ತೆ ಪ್ರಸಂಗ ರಚನೆಗೆ ಮರುಸುಗ್ಗಿ ಬಂದಿದೆ. ಇದಕ್ಕೆ ಯಕ್ಷಗಾನದ ಇತ್ತೀಚೆಗಿನ ವ್ಯಾಪಾರೀಕರಣ ಸ್ಥಿತಿಯೂ ಕಾರಣವಾಗಿದೆ. ಹಿಂದಿನ ಹಾಗೂ ಇಂದಿನ ಪ್ರಸಂಗ ಕೃತಿಗಳಲ್ಲಿ ಸಾಹಿತ್ಯಿಕ ಮೌಲ್ಯ ಇರುವ ಕೃತಿಗಳು ಕಡಿಮೆ ಎಂದೇ ಹೇಳಬೇಕು. ಕಡಿಮೆಯಾದರೂ ಅವುಗಳನ್ನು ಕಡೆಗಣಿಸುವಂತಿಲ್ಲ.

ಕನ್ನಡದ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಯಕ್ಷಗಾನ ಸಾಹಿತ್ಯವನ್ನೇ ಬಹುಮಟ್ಟಿಗೆ ಉಪೇಕ್ಷಿಸಲಾಗಿದೆ ಎನ್ನಬೇಕು ಯಾವ ದೃಷ್ಟಿಯಿಂದ ನೋಡಿದರೂ ಯಕ್ಷಗಾನ ಸಾಹಿತ್ಯವು ಉತ್ಕೃಷ್ಟ ರೀತಿಯಾದುದು ಎನ್ನಬೇಕಾಗುತ್ತದೆ. ರಾಗತಾಳ ಬದ್ಧವಾಗಿ ನೃತ್ಯಕ್ಕೆ ಒದಗುವ ಗೇಯ ರೂಪದ ಈ ಕಾವ್ಯ ಯಕ್ಷಗಾನ ದೃಶ್ಯಪ್ರಯೋಗಕ್ಕೆ ಆಧಾರವಾಗಿರುವ ವಿವಿಧ ರಸಭಾವ ಸಮನ್ವಿತವಾದ ಸಾಹಿತ್ಯ ಪ್ರಕಾರವಾಗಿದೆ. ಇದರ ರಚನೆಯೂ ಸುಲಭ ಸಾಧ್ಯವಿಲ್ಲ. ಅದಕ್ಕೆ ಪ್ರತ್ಯೇಕವಾದೊಂದು ಪರಿಣತಿ ಬೇಕಾಗುತ್ತದೆ.

ಶ್ರೀ ನಾರಾಯಣ ರಾಯರು ಯಕ್ಷಗಾನ ಕಲೆಯಲ್ಲಿ ಪಳಗಿದವರು. ಸುಂದರವಾದ ಈ ಕೃತಿ ಸಾಂಪ್ರದಾಯಿಕ ಚೌಕಟ್ಟಿನಲ್ಲಿದ್ದು ಪ್ರಯೋಗಕ್ಕೆ ಯುಕ್ತವಾಗಿದೆ. ಆಟಕ್ಕೂ, ಕೂಟಕ್ಕೂ ಬೇಕಾಗುವಷ್ಟು ಪಾತ್ರಗಳು ಈ ಕಥಾನಕದಲ್ಲಿವೆ. ಯಕ್ಷಗಾನದ ರಮ್ಯಾದ್ಭುತ ಸ್ವರೂಪದಲ್ಲಿ ಬಿಂಬಿಸತಕ್ಕ ಪಾತ್ರಗಳ ವೈವಿಧ್ಯವೂ ಇಲ್ಲಿದೆ.

ದೃಶ್ಯ ಸಂಯೋಜನೆಯೂ, ಭಾಷಾ ಸೌಷ್ಠವವೂ ಸೊಗಸಾಗಿದೆ ನಾನಾ ಬಗೆಯ ಛಂದೋಬಂಧಗಳನ್ನು ಕವಿ ಇಲ್ಲಿ ಪ್ರಯೋಗಿಸಿದ್ದಾರೆ.

ಈ ಸೊಗಸಾದ ಕೃತಿಗಾಗಿ ಪ್ರಸಂಗಕಾರರನ್ನು ಅಭಿನಂದಿಸುತ್ತಾ ಈ ಕ್ಷೇತ್ರಕ್ಕೆ ಇನ್ನೂ ಬೆಲೆಯುಳ್ಳ ಕೊಡುಗೆಗಳನ್ನು ಶ್ರೀಯುತರು ನೀಡಲೆಂದು ಹಾರೈಸುತ್ತೇನೆ.

'ಒಲುಮೆ' ಕೋಟೆಕಾರು — ಅಮೃತ ಸೋಮೇಶ್ವರ
3-1-2000

ಕಲಾತಪಸ್ವಿಯ ನೆನಪಿನೊಂದಿಗೆ

ತಂಪಾದ ನೆರಳನ್ನು ನೀಡುವ ವೃಕ್ಷವೊಂದು ಬೆಳೆದು ನಿಂತು ಎಲೆ ಚಿಗುರುಗಳಿಂದ ನಳನಳಿಸುವಲ್ಲಿ ನೀರುಣಿಸುವ ಬೇರುಗಳ ಪಾತ್ರ ಬಹಳ ಮುಖ್ಯ.

ಯಕ್ಷಗಾನ ಕಲಾಕಲ್ಪಧ್ರುಮವೊಂದು ಸರ್ವಾಂಗ ಸುಂದರವಾಗಿ ಬೆಳೆದು ನಿಲ್ಲುವಲ್ಲಿ ಬೇರಿನೋಪಾದಿಯಲ್ಲಿ ನೀರುಣಿಸಿದ ಸಾವಿರಾರು ಮಂದಿ ಕಲಾವಿದರು ಗುರುತಿಸಲ್ಪಡದೆ ನೇಪಥ್ಯದಲ್ಲಿ ಉಳಿದು ಬಿಟ್ಟಿದ್ದಾರೆ. ಹೀಗೆ ತೆರೆಯ ಮರೆಯಲ್ಲಿದ್ದು ಕಲಾ ಸೇವೆಯನ್ನು ಮಾಡಿದವರಲ್ಲಿ ದಿವಂಗತ ವಿಷ್ಣುಮೂಡೆತ್ತಾಯರೂ ಒಬ್ಬರು.

ಬಂಟ್ವಾಳ ತಾಲೂಕು ಕೊಳ್ನಾಡು ಗ್ರಾಮದ ನಾರ್ಶ್ಯದ ದಿ| ರಾಮಣ್ಣ ಮೂಡೆತ್ತಾಯ ಮತ್ತು ಭಾಗೀರತಿ ಅಮ್ಮನವರ ತೃತೀಯ ಪುತ್ರ ದಿ| ವಿಷ್ಣುಮೂಡೆತ್ತಾಯ (10-3-21) ರು ಪರಂಪರೆಯಿಂದ ಅರ್ಚಕರಾದರೂ ಪ್ರವೃತ್ತಿಯಿಂದ ಕಲಾವಿದರು. ನಾರ್ಶ್ಯಾದ ಶ್ರೀ ನರಸಿಂಹ ದೇವಸ್ಥಾನದಲ್ಲಿ, ಮಂಚಿ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಮತ್ತು ಬೂಡಿನಬೈಲು, ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಒಟ್ಟು 35 ವರ್ಷಗಳ ಕಾಲ ಅರ್ಚಕರಾಗಿ ಸೇವೆ ಸಲ್ಲಿಸಿದ ಇವರು ತಮ್ಮ ಬಿಡುವಿನ ವೇಳೆಯನ್ನು ಕಲಾಸೇವೆಗಾಗಿ ಮೀಸಲಿಟ್ಟಿದ್ದರು. ಪತ್ನಿ ಸುಶೀಲಮ್ಮನವರೂ ಇವರ ಪ್ರವೃತ್ತಿಗೆ ಅಡ್ಡಿಯಾಗದೆ ಸಹಕರಿಸಿದ್ದರು.

ತಮ್ಮ ಜೀವಿತಾವಧಿಯ ಕೊನೆಯ ಭಾಗವನ್ನು ಮೂಡುಗೆರೆ ತಾಲೂಕಿನ ಕುನ್ನಹಳ್ಳಿ ಎಂಬಲ್ಲಿ 5 ಗಂಡು 3ಹೆಣ್ಣು ಮಕ್ಕಳೊಂದಿಗೆ ನೆಮ್ಮದಿಯಿಂದ ಕಳೆದು ದಿನಾಂಕ 11-1-98 ರಂದು ಕಾಲವಶರಾದ ಈ ಕಲಾ ತಪಸ್ವಿಯ ಸ್ಮರಣಾರ್ಥವಾಗಿ ಈ ಯಕ್ಷಗಾನ ಕೃತಿಗೆ ಆರ್ಥಿಕವಾಗಿ ಕಿರುಕಾಣಿಕೆಯ ನೆರವನ್ನಿತ್ತ ಶ್ರೀಯುತ ರಾಘವ ಮೂಡೆತ್ತಾಯ ಮತ್ತು ಸಹೋದರರಿಗೆ ಕೃತಿಕಾರನು ಕೃತಜ್ಞ.

- ಲೇಖಕ

ಬರೆದವನ ಬಿನ್ನಹ

ಇದು ನನ್ನ ಮೊದಲ ಯಕ್ಷಗಾನ ಕೃತಿ. ಭಾಮಿನೀ ಷಟ್ಪದಿಯ, ಸೀತಾವಿಯೋಗವೆಂಬ ನನ್ನ ರಚನೆಯನ್ನು ಓದಿ ಮೆಚ್ಚಿದ ಮಿತ್ರ, ಉಪನ್ಯಾಸಕ ಕೇಶವ ಶರ್ಮರು, ನನ್ನ ಈ ರಚನೆಗೆ ಪ್ರೇರಕಶಕ್ತಿಯಾದರು. ಇತ್ತೀಚೆಗೆ ವ್ಯಾಪಾರೀ ಮನೋಭಾವದಿಂದ ಪ್ರದರ್ಶಿಸಲ್ಪಡುವ ಕಾಲ್ಪನಿಕ ಕಥೆಗಳನ್ನೊಳಗೊಂಡ ರಚನೆಗಳ ನಡುವೆ ಇಂತಹ ಪೌರಾಣಿಕ ಕೃತಿಗಳು ಜನಾದರಣೀಯವಾದೀತೆಂದು ಭಾವಿಸುತ್ತೇನೆ.

ಮಹಾಭಾರತದೊಳಗಣ ಈ ಪ್ರಸಂಗದ ಕಥಾಭಾಗವನ್ನು ಸೂಚಿಸಿದ ಶ್ರೀ ಪಾತಾಳ ವೆಂಕಟ್ರಮಣ ಭಟ್ಟರಿಗೂ, ರಾಗ, ತಾಳಗಳನ್ನು ತಿದ್ದಿ ಪರಿಷ್ಕರಿಸಿದ ಶ್ರೀ ವಿಘ್ನೇಶ್ವರ ಭಟ್ಟರಿಗೂ ನಾನು ಕೃತಜ್ಞ. ಈ ಕೃತಿಯನ್ನು ಬರೆಯುತ್ತಿದಂತೆಯೇ ಓದುತ್ತಾ ಮೆಚ್ಚಿ ಪ್ರೋತ್ಸಾಹಿಸಿದ ಉಪನ್ಯಾಸಕ ಮಿತ್ರರಾದ ಶ್ರೀ ಮೊರಬದ ಮಲ್ಲಿಕಾರ್ಜುನ ಮತ್ತು ಶ್ರೀ ವೆಂಕಟರಮಣ ಭಟ್ ಬಳ್ಳರನ್ನು ನಾನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ.

ಈ ಕೃತಿಯ ಶೋಭೆಯು ಹೆಚ್ಚುವಂತೆ ಮುನ್ನುಡಿಯನ್ನು ಬರೆದು ಶುಭ ಹಾರೈಸಿದ ಖ್ಯಾತ ಸಾಹಿತಿ ಶ್ರೀಯುತ ಅಮೃತ ಸೋಮೇಶ್ವರರಿಗೆ ನಾನು ಚಿರಋಣಿ.

ಪ್ರಸಂಗಕ್ಕೆ ಸೂಕ್ತ ಹೆಸರನ್ನು ಸೂಚಿಸಿದ ಶ್ರೀಯುತ ಗೋಪಾಲಶೆಟ್ಟಿ ಕಳೆಂಜ ಮತ್ತು ರಕ್ಷಾಪುಟಗಳ ವಿನ್ಯಾಸಕ್ಕೆ ರೂಪದರ್ಶಿಗಳಾದ ಶ್ರೀ ದಿವಾಕರ್ ಗೇರುಕಟ್ಟೆ ಮತ್ತು ಶ್ರೀ ಹರಿಶ್ಚಂದ್ರ ಆಚಾರ್ಯರಿಗೆ ನಾನು ಕೃತಜ್ಞ.

ಕೃತಿಯು ಪ್ರಕಟವಾಗುವಲ್ಲಿ ಸಲಹೆ ಸೂಚನೆಗಳನ್ನಿತ್ತ ನನ್ನ ಮಿತ್ರರಿಗೂ, ಪ್ರಕಾಶಕರಿಗೂ, ಸಕಾಲಕ್ಕೆ ಮುದ್ರಣ ಕಾರ್ಯವನ್ನು ಮುಗಿಸಿ ಕೊಟ್ಟ ಶ್ರೀನಿಧಿ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲೀಕರು ಮತ್ತು ಸಿಬ್ಬಂದಿ ವರ್ಗದವರಿಗೂ ಈ ಕೃತಿಯನ್ನು ಬಿಡುಗಡೆ ಮಾಡುತ್ತಾ ಶುಭ ಹಾರೈಸಿದ ಶ್ರೀಯುತ ಕುಬಣೂರು ಶ್ರೀಧರ ರಾಯರಿಗೂ ಲೇಖಕನು ಆಭಾರಿ.

ಈ ಕೃತಿಯು ಪ್ರದರ್ಶಿಸಲ್ಪಟ್ಟು, ಜನಮಾನ್ಯತೆಯನ್ನು ಪಡೆದರೆ ನನ್ನ ಶ್ರಮ ಅರ್ಥಪೂರ್ಣವಾದಂತೆ. ಕಲಾಭಿಮಾನಿಗಳ ವಿಮರ್ಶೆಗಳಿಗೆ ಸ್ವಾಗತ.

ಉಪ್ಪಿನಂಗಡಿ
3-1-2000

ಇಂತು: ವಿದ್ವಜ್ಜನ ವಿಧೇಯ
ಹೆಚ್. ನಾರಾಯಣ ರಾವ್

ಅಮರಸೇನಾಧಿಪತ್ಯ

ಭಾಮಿನಿ

ಸಿರಿಯರಸನಡಿಗೆರಗಿ ಗಿರಿಜಾ । ವರಗೆ ವಂದಿಸಿ ನುತಿಸಿವಾಣೀ । ವರಗೆ ಕೈಮುಗಿದೆರಗಿ ಮನದಲಿ ಶಾರದೆಯ ನೆನೆದು ।। ವರಗಿರಿಯೊಳೆಸೆದಿರುವಗಂಗಾ । ಧರನ ತರಳಗೆ ನಮಿಸಿ ಬರೆವೆನು । ಹರಸುತನ ಸುರ ಸೇನೆಯಧಿಪನ ವಿನುತ ಚರಿತೆಯನು ।।೧।।

ವಾರ್ಧಿಕ :

ಸುರಧೇನು ವರ ಪಾರಿಜಾತ ಕಲ್ಪವೃಕ್ಷ । ಗುರುಪುಷ್ಪ ಮಂದಾರ ಮುಚ್ಛೈಶ್ರವಸ್ಸುಧಾ । ಕರವವೃತ ಐರಾವತಾದಿ ನವನಿಧಿಗಳಂಭೋಗಿಸುತ ಹರಿಕರುಣೆಯಿಂ । ಸುರರೊಡೆಯನೊಂದುದಿನ ವೋಲಗವನಿತ್ತು ಯಮ । ವರುಣ ವಾಯು ಕುಬೇರ ಅಗ್ನಿ ನೈರುತ್ಯರಂ । ಕರೆದೆಂದ ವರಬಲದ ಗರ್ವದಿಂದಡಿಗಡಿಗೆ ಬರುವ ಸುರರಿಂಗೆ ಬೆದರಿ ।।೧।।

ರಾಗ-ಸೌರಾಷ್ಟ್ರ-ತ್ರಿವುಡೆತಾಳ:

ವರಬಲದೊಳಡಿಗಡಿಗೆ ಅಸುರರು । ಸುರಪ ಪದವಿಯ ಬಯಸಿ ಬರುತನು । ವರದೊಳೆಮ್ಮನು ಸೋಲಿಸಲು ಸಿರಿ । ಹರಿಯ ದಯದಿ ।।೧।। ಮುರಿದು ರಕ್ಕಸರನ್ನು ಪದವಿಯ । ಮರಳಿ ಪಡೆದೆವು ಹರಿದಯದಿ ದುರು । ಳರನು ನಾವೇತಡೆವುದೆಂತೆನು ತಿರಲು ಅಗ್ನಿ ।।೨।।

ರಾಗ-ಭೈರವಿ-ಅಷ್ಟತಾಳ :

ಬಿಡುಬಿಡು ಚಿಂತೆಯನೀಗ । ಅನುವರದೊಳಾ । ದಡಿಗಾಧಮರನುಬೇಗ । ಕಿಡಿದೋರುತ ಸುಡುವೆನೆನುತಿರಲಾಗ । ನುಡಿದನು ಮಾರುತ ನಾಗ ।।೧।। ತ್ರಿದಶಾಧಿಪ ಕೇಳಿತ್ತ । ದಾನವರಿಂಗೆ। ಬೆದರದಿರು ಸುರ ಪೂಜಿತ । ಕೆದಕಿ ಬಹ ದನುಜಾದಿಗಳನ್ನು ಕುತ್ತಿ । ಒದಗಿ ಕೊಲುವೆನು ಸನ್ನುತ ।।೨।। ವರುಣಾದಿಗಳು ಪರಿಪರಿ । ಭಾಷೆಗಳನ್ನು । ಒರೆಯುತಿರಲಸುರವೈರಿ । ಹಿರಿದು ಮನ್ನಿಸುತವರ ಬಳಿಗೆ ಸಾರಿ । ಭರದೊಳುಸುರಿದ ನೀಪರಿ ।।೩।।

ರಾಗ-ನಾಟಿ-ಝುಂಪೆತಾಳ :

ವರಬಲಗಳನು ಮೀರಿ ಗೆಲುವ ಸಾಧಿಸುವಂತ । ಪರಮ ವಿಕ್ರಮಿಯೋರ್ವನಿಂದು । ಸುರಬಲಕೆ ಸೇನಾನಿಯಾಗಿ ದೊರೆತರೆ ದಾನ । ವರನು ಗೆಲುವುದು ಸಾಧ್ಯವೆನುತ ।।೧।।

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ದುರುಳರಿಗೆ ವರವೀವ ಹರನೊಳ । ಗಿರದೆ ಕಷ್ಟವ ನರುಹಿ ಅಸುರರ । ಧುರದಿ ಗೆಲುವನ ಪಡೆವೆನೆನ್ನುತ । ಸುರಪತಾನು ।।೧।।

ವಾರ್ಧಿಕ :

ಸುರರೆರೆಯ ಸುರರಿಗಿಂತರುಹಿ ಮನದಿಂಗಿತವ । ಪುರದಕಾವಲ ಬಲಿದು ತರುಣಿಮಕ್ಕಳ ಕಂಡು। ಕಿರಿದವಧಿಯೊಳ್ ಮರಳಿಬಹೆನೆಂದು ಸಂತಯಿಸಿ ಪುರವ ಪೊರಮಟ್ಟು ಬಳಿಕ ।। ಹರನ ಕಾಬೊಲವಿನಿಂ ಹರಿದು ವರ ಕೈಲಾಸ । ಗಿರಿವರನ ನೇರುವೊಡೆ ಸೋಪಾನದಂತೆಸೆವ । ವರಮಾನಸವ ಕಂಡು ದಣಿವಾರಿಸುವೆನೆಂದು ತರುನೆರಳನಾಂತಿರುತಿರೆ ।।೧।।

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಇತ್ತ ಸುರಪತಿಯಿಂತಿರಲು ಮದ । ಮತ್ತಖಳನಾ ಕೇಶಿ ಮಾನಸ । ದುತ್ತರದ ಗಿರಿಪುರದೊಳೋಲಗ । ವಿತ್ತು ಮದದಿ ।।೧।। ಕತ್ತಲೆಯ ನಾಚಿಸುವ ರಕ್ಕಸ।ಭೃತ್ಯರನು ಕರೆದೆಂದ ಸುರನರ । ಮೊತ್ತ ದೊಳಗೆನ್ನವೊಲು ಸಾಹಸ ಸತ್ವರುಂಟೇ ।।೨।। ಭಾವಜಾರಿಯಭಜಿಸಿವರಗಳ। ನೋವಿ ಪಡೆದಿಹೆ ನೀಯಜಾಂಡ ದೊ।ಳಾವನಿದಿರಿಹನೆನಲು ಬಂದನು।ದೇವಮುನಿಯು ।।೩।।

ಭಾಮಿನಿ :

ಹರಿಯ ನೆನೆಯುತ ಮನದಿ ನಾರದ । ವರಮುನಿಯು ಬರಲೆದ್ದು ದನುಜನು । ಸುರುಚಿರಾಸನವಿತ್ತು ತಾನಡಿಗೆರಗುತುಪಚರಿಸಿ । ಪರಮ ಪಾವನವಾಯ್ತು ಪೊಳಲಿದು । ಬರವದೆತ್ತಣಿನಾಯ್ತು ಕಾರ್ಯವ । ನರುಹಬೇಕೆನಲಾಗ । ಸುರಮುನಿ ನಗುತಲಿಂತೆಂದ ।।೧।।

ರಾಗ-ಬೇಗಡೆ-ಏಕತಾಳ :

ಲಾಲಿಸೈ ದನುಜಾಧಿಪತಿಮೌಳಿ । ನಿನ್ನ ಕೀರ್ತಿಯ । ನಾಲಿಸುತಲೈತಂದೆ ಸಮಶೂಲಿ । ಫಾಲನೇತ್ರನ ಭುಜಬಲದ ಸಮ । ಪಾಳಿ ನಿನ್ನಯ ಮನದ ಭಕ್ತಿ ವಿ । ಶಾಲತೆಗೆ ಮೆಚ್ಚಿದೆನು ಸದ್ಗುಣ । ಶೀಲಪೇಳುವೆನೊಂದು ಮಾತನು ।।೧।। ತೃಣಯಪದ ಪಂಕೇರುಹ ಭೃಂಗ । ಅರಿತಿಮಿರಬೇದನ । ವನಜ ಸಖಸಮಶೂರನುತ್ತುಂಗ । ಘನನೆಸಾಹಸ ಸತ್ವ ಸಂಪದ । ಮೆನಿತುಮಿರ್ದಡದೇನು ಪಟ್ಟದ । ವನಿತೆಯಿಲ್ಲದೆಶೋಭಿಸದು ಕೇ । ಳೆನಲು ದಾನವ ಮನದಿ ಯೋಚಿಸಿ ।।೨।।

ರಾಗ-ಕೇದಾರಗೌಳ-ಅಷ್ಟತಾಳ :

ವರಮುನಿಯಿಂತುಸಿರಲು ಕೇಳಿ ದನು ಜೇಂದ್ರ । ನೆರಗಿ ಸಂತೋಷದಿಂದ । ಧರೆಯೊಳಗೆನ್ನಯ ಕೀರ್ತಿಗೆ ಸರಿದೊರೆಯಾಗಿ । ಮೆರೆಯುವ ಸತಿಯತೋರೆಂದ ।।೧।।

ಭಾಮಿನಿ :

ಒರೆವೆನಾದಡೆ ಕೇಳು ಮಾನಸ । ವರವನಾಂತ ವಿಹಾರಕೆನುತಲಿ ಬರುವರೀರ್ವರು ಸತಿಯರವರನು ವಿನಯದಲಿ ನೀನು । ಸರಸ ಮಾತುಗಳಿಂದ ಲೊಲಿಸುತ । ವರಿಸಿ ಬಾಳೆನುತಮರ ಮುನಿವರ । ಹರಸಿಪೊರಮಡಲಿತ್ತ ಕೇಶಿಯ ತನ್ನವರ ಕರೆದು ।।೧।।

ರಾಗ-ಕೇದಾರಗೌಳ-ಅಷ್ಟತಾಳ :

ಕರೆದುತನ್ನಯ ಬಳಗವನೆಲ್ಲನಾರದ । ನೊರೆದುದ ನೆರೆತಿಳುಹಿಸುತ । ಪುರವ ಕಾಯ್ವುದು

ಬೇಗ ಮರಳಿ ಬಂದಪೆನೆನುತ || ಚರಸಹಿತ ಪೊರಮಡುತಾ ||೧|| ಭರದಿ ಬಂದಾ ಕೇಶಿ ಮಾನಸ ಗಿರಿಯೊಳಾ | ನೀರಜೇಕ್ಷಣೆಯರನ್ನು | ವರಮುನಿಪನೆಂದ ಮಾತುಗಳನ್ನು ನೆನೆಯುತ್ತ | ಲರಸುತ್ತೈತರಲಿತ್ತಲು ||೨||

ರಾಗ-ನಾಟಿ-ಝಂಪೆತಾಳ :

ಇತ್ತಲು ಪ್ರಜಾಪತಿ ಬ್ರಹ್ಮನಕ್ಕರೆಯ | ಪುತ್ರಿಯರು ಅಂತಃಪುರದೊಳಗೆ | ಪೃಥ್ವಿಯೊಳು ಚೆಲುವಿಕೆಗೆ ಹೆಸರಿಡುತ ದಿನದಿನಕೆ | ಚಿತ್ತಜನಶರಗಳೊಲು ಬೆಳೆಯೆ ||೧|| ಕಿರಿಯವಳು ಸುರಸೇನೆ ದೈತ್ಯಸೇನೆಯು ಹಿರಿಯ | ಳಿರುತಿರಲು ಕಾಲಾನುಕ್ರಮದಿ || ಶರಜಾಕ್ಷಿಯರು ಷೋಡಷಿಯರಾಗಿ ಬೆಳೆಯುತಲ | ಸುರಸೇನೆ ಸಹಜೆಯನು ಕರೆದು ||೨||

ರಾಗ-ಜಂಜೂಟಿ-ಅಷ್ಟತಾಳ :

ತಂಗಿ ಕೋಮಲೆಯೆ ಕೇಳೆಲೆಗೆ | ಮನ | ಮುಂದುಗೆಡುತಲಿಹುದೆನಗೆ | ಚಂಚಲಿಪುದು ಬಾರೆಪೋಗುವವನದೆಡೆ | ಗೆಂದುಮಾನಸಗಿರಿಯೆಡೆಗೆ ನಡೆ | ತಂದರಾಗಲು ವನಜ ಮುಖಿಯರು ||೧|| ನೋಡಕ್ಕ ನೋಡು ನೋಡೆನುತ | ಗಿರಿ | ಕೋಡುಗಲ್ಲುಗಳ ತೋರಿಸುತ | ಕೂಡಿ ಹಾಡುತಲಲ್ಲಿ ಕಾಣುವ ಸರಸಿಯ | ನೋಡಿ ಮನದಲಿ ಮೀಯುವರೆಮನ | ಮಾಡಿ ಸರಸಿಯೊಳಿಳಿದರಾಗಲು ||೨||

ರಾಗ-ನವರೋಜು-ಏಕತಾಳ:

ತರುಣಿಯರಾಡಿದರಂದು | ಘನ | ಹರುಷದಲಿಜಲಕೇಳಿಯನು ||ಪಲ್ಲ|| ಧರಿಸಿಹ ವಿಮಲಾಂಬರಗಳ ಕೆಲದೊಳ | ಗಿರಿಸಿ ಸರಸಿಯೊಳು | ಸರಸಿಜಮುಖಿಯರು || ಅನುಪಲ್ಲ || ಬೊಗಸೆಯೊಳಗೆ ಜಲವ | ಮೊಗೆ | ಮೊಗೆದೆರಚುತಲಿ ಮೊಗಕೆ | ನಗು ಮೊಗನೆಗಹುತ | ನೀರೊಳಗಪ್ಪುತ | ಬಗೆಬಗೆಯಾಟವನಾಡಿ ವಿನೋದದಿ || ತರುಣಿಯ ||೧|| ಕಮಲದರಳ ನಡುವೆ | ಮುಖ | ಕಮಲವನು ಮರೆಮಾಡುತ | ಕಮಲಾಕರದೊಳು ಕಮಲಗಳಲ್ಲದೆ | ಕಮಲಾಕ್ಷಿಯರಿರವರಿಯದ ತೆರದಲಿ || ತರುಣಿಯ ||೨|| ಪುರುಷನು ನೀನೆನ್ನುತಲಿ | ನವ | ತರುಣಿಯ ಬಿಗಿದಪ್ಪುತಲಿ | ಭರಿತ ಸಂತಸದಲಿ | ಹರಿಣಾಕ್ಷಿಯರಾ | ಶರಕೇಳಿಯಲೀಪರಿಮೈಮರೆಯುತ || ತರುಣಿಯ ||೩||

ರಾಗ-ಜಂಜೋಟಿ-ಅಷ್ಟತಾಳ :

ನೀರಾಟವಾಡುತ್ತ ಮಿಂದು | ದಡ | ವೇರಿ ನಲಿದಾಡುತ್ತಲಂದು | ವಾರಿಜ ಮುಖಿಯರು ಸುಮಗಳನರಸುತ್ತ ಮೀರಿ ನಡೆಯುತಲಾಗಕಿರಿಯ ಕುಮಾರಿ ಅಕ್ಕನನಗಲಿ ಬೆದರುತ ||೧||

ರಾಗ-ನೀಲಾಂಬರಿ-ತ್ರಿವುಡೆತಾಳ :

ಓ ಅಕ್ಕ ಬಾರೆನ್ನುತ | ತಂಗಿಯುಕರೆ | ದಕ್ಕ ಎಂದಳುತಳುತ | ಸಿಕ್ಕಾ ಕುಸುಮಗಳನು | ಪಕ್ಕ ಕುಯ್ಯುವೆನೆಂದು | ಅಕ್ಕ ಪೋದೆಯ ಬಂದು | ದುಕ್ಕಬಿಡಿಸೆ ||೧|| ಇಂತು ಅಕ್ಕನ ಕರೆಯುತ |

ಸುರಸೇನೆಯು । ಮುಂದುಗೆಟ್ಟಳುತಳುತ । ನಿಂನನು ಬಿಟ್ಟೋರ್ವ । ಳೆಂತು ಪೋಪೆನುಯೆನು। ತೊಂದರಿಯದಳಲುತಿರ । ಲಂದು ಸತಿಯು ॥೨॥

ವಾರ್ಧಿಕ :

ಸುರಸೇನೆಯೀಪರಿಯೊಳಳಲುತಿರಲಾಸಹಜೆ । ಮರೆತು ಸುರಸೇನೆಯನು ಕುಸುಮಗಳನರಸುತ್ತ। ಭರದೊಳೈತರಲಿತ್ತಲಸುರಕೇಶಿಯು ಕಂಡು ಚೆಲುವಿಕೆಗೆ ಮನ ಸೋಲುತ ॥ ಸುರನರೋರಗರೊಳಗೆ ಕಂಡರಿಯೆನೀಪರಿಯ । ತರುಣ ಶಶಿ ಚಂದ್ರಿಕೆಯ ತೆರದಿ ಬೆಳಗುವ ಸತಿಯ । ಕರೆದು ಮಾತಾಡಿಸುವೆನೆಂದೆನುತ ಕೇಶಿಯತಿ ಸಂಭ್ರಮದಿ ಕರೆಯುತವಳ ॥೧॥

ರಾಗ-ಮುಖಾರಿ-ಏಕತಾಳ:

ವನದೊಳಗೀಪರಿ ಸುಮಗಳಕೊಯ್ಯುವ । ಗುಣಮಣಿ ನೀನ್ಯಾರೆ । ವನಜಾಂಬಕಿ ಪೆಸರೇನೆಲೆಯೆನ್ನಯ । ಮನವ ಸೆಳೆದ ನೀರೆ ॥ಪಲ್ಲ॥ ಕೆಂಡ ಸಂಪಿಗೆಯ ಚೆಲುವನಾಸಿಕದ । ತುಂಬು ದುಟಿಯ ಜಾಣೆ । ಕಂಬು ಸರಸಿಜವು ಕುರುಳು ದುಂಬಿಗಳು । ಕಂಠ ಮಧುರ ವೀಣೆ ॥೧॥ ಕಂಬು ಕಂಧರದ ತುಂಬುಕುಚಭರದ । ಸಂಣನಡುವಿನವಳೆ । ಕುಂದ ಮಾಲಿಕೆಯ ರದನ ಪಂಕ್ತಿನಗೆ । ದಿಂಗಳ ಮುಖದವಳೆ ॥೨॥ ಮಂದಗಾಮಿನಿಯೆಮಧುರಭಾಷಿತನು । ಗಂಧದಾರೂಪಸಿ । ಗಂಧವಾರಣೆಯೆ ಮಧುಮಯಾಧರೆಯೆ । ಅಂದದಾ ಪ್ರೇಯಸಿ ॥೩॥ ತನುವು ನೊಂದಿಹುದು ಮನವು ಬೆಂದಿಹುದು । ನನೆಯ ಮೊನೆಯ ಉರಿಗೆ । ಮನದಿ ನೀನೊಪ್ಪು ತನುವ ಬಿಗಿದಪ್ಪು । ಎನಲುಕೇಶಿಹೀಗೆ ॥೪॥

ವಾರ್ಧಿಕ :

ದುರುಳ ನೀಪರಿ ಬಣ್ಣಿಸಲು ನಾಚಿ ಲಲಿತಾಂಗಿ । ಅರಳಶರನುಪಟಳಕೆ ಮನ ಮಾರಿ ಮತಿಮರೆತು। ಕರಮುಗಿದು ಮೋಹ ಪರವಶಳಾಗಿ ವಿನಯಮಿಗೆ ನುಡಿದಳಾ ದನುಜನೊಡನೆ ॥ ಒರವೆ ಕೇಳೈ ಪ್ರಜಾಪತಿ ಬ್ರಹ್ಮನಾಹಿರಿಗು । ವರಿಯಸುರ ಸೇನೆಯೆನುವಭಿ ದಾನ ಸುಮಗಳನು । ಅರಸುತ್ತೈತರೆ ಬಂದು ನುಡಿಸಿದ್ಯೆ ನೀನಾರು ಪೇಳೆನಲು ದನುಜ ನುಡಿದ ॥೧॥

ರಾಗ-ಕೇದಾರಗೌಳ-ಅಷ್ಟತಾಳ :

ಮಾನಿನಿಯೆಂದ ಮಾತನುಕೇಳಿ ಖಳತಾನು । ಹೂನಗೆಯನು ಬೀರುತ್ತ । ಮಾನಿನಿಮಣಿಕೇಳು ಅಸುರರೊಳಗಗ್ಗಳನು । ಮಾನಸಾಧಿಪತಾನೆಂದ ॥೧॥

ರಾಗ-ಕೇದಾರಗೌಳ-ಝಂಪೆತಾಳ :

ದನುಜನಿಂತೆನಲು ಕೇಳಿ । ಸತಿಯಾಗ । ಮನದಿ ಸಂತಸವ ತಾಳಿ । ಘನನು ನೀನಹುದು ಎನುತ । ಪಾದಕ್ಕೆ । ಮಣಿದಮರ್ದಪ್ಪಿಕೊಳುತ ॥೧॥ ಗಾಂಧರ್ವವಿಧಿಯಿಂದಲಿ । ಅಸುರತಾ। ಕಾಂತೆಯಳ ಕೂಡುತ್ತಲು । ಕಾಂತಾರದೊಳಗಿರುತಿರೆ । ಉಸುರಿದಳು । ಕಾಂತ ಕೇಳೆಂದು ಚದುರೆ ॥೨॥ ಮಾನನಿಧಿ ಕೇಳು ನಾವು । ಸಹಚೆಯರು । ಮಾನ ಸಾದ್ರಿಗೆ ಬಂದೆವು । ಕಾನನದೊಳು ತಂಗಿಯ ಅಗಲಿದೆನು । ದಾನವನೆ ಅರಸುವಳನು ॥೩॥

ಅರ್ಧವಾರ್ಧಿಕ :

ಅರಸಬೇಕವಳನೆಂದಳಲುತಿಹ ಸತಿಯಳಂ । ಸರಿಯೆನುತ ಸಂತಯಿಸಿ ಕರೆದು ಚಾರಕನ ಜೊತೆ ಅರಮನೆಗೆ ಕಳುಹುತ್ತ ಸುರಸೇನೆಯಳನರಸುತಸುರತಾನಿತ್ತಲಿರಲು ||೧||

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಇತ್ತ ದೇವರ್ಕಳಿಗೆ ಯಜ್ಞದಿ । ಬುಕ್ಕ್ಯ ಮನೆ ಅರ್ಪಿಸುವ ಹವ್ಯದ । ಮೊತ್ತವನ್ನೊದೀವ ಸಾಹಸಸತ್ವಶಾಲಿ ||೧|| ಅದುಭುತಾನಲ ಮೆರೆಯುತಿರೆತಾ । ನುದಯದಿಗ್ಭಾಗದಲಿ ಮುನಿವರ। ರೊದಗಿ ಪೇಳುವ ಮಂತ್ರಗಳ ತಾನದುಭುತನಲ ||೨|| ಆಲಿಸುತಲಾಹ್ವಾನ ವಿದುಮುನಿ । ಜಾಲದಿಂದೆಮಗೆನುತ ತಾನಿರ । ದೇಳುತಲಿ ಪೊರಮಟ್ಟು ಬರಲುವಿ । ಶಾಲಮನನು ||೩||

ರಾಗ-ಮಧು ಮಾಧವಿ-ತ್ರೀವುಡೆತಾಳ :

ಇತ್ತ ಸ್ವಾಹಾದೇವಿ ದಕ್ಷನ । ಪುತ್ರಿ ಹರೆಯದ ಕನಸುಗಳ ಕಾ । ಣುತ್ತ ನಿದ್ರಾದೇವಿ ಸುಳಿಯದಿ। ರುತ್ತ ತಾನಾದಿನದೊಳು ||೧|| ತೊರೆಯು ತಂತಃ ಪುರವ ಮೆಲ್ಲಡಿ । ಯಿರಿಸಿ ಹೊರಸುಮನಂದ ನಕೆ ಹರಿ । ತರುತತೀಡಲು ಪುಷ್ಪ ಸೌರಭ । ಭರಿತಮಂದಮಾರುತನು ||೨|| ತೀಡುವನಿಲಂಗುರಿವ ತನುವನು । ನೀಡಿ 'ಹಾ'ಯೆನುತಿರಲು ಸ್ವಾಹೆಯು ನೋಡಿದಳು ಬಪ್ಪನಲನಂದವ । ಮೂಡಿ ಹರೆಯದ ಬಯಕೆಯು ||೩||

ಭಾಮಿನಿ :

ಈಡುಜೋಡುಗಳುಂಟೆ ಲೋಕದಿ । ತೀಡಿದಂಗಚ್ಛವಿಗೆ ರೂಪವ । ನೋಡಿ ಬಯಸದ ಸತಿಯರುಂಟೇ ಹವ್ಯವಾಹನನ ॥ ಗಾಡಿಕಾರನೊ ಮುಗುದೆಯರ ಮನ। ಮೋಡಿಕಾರನೊಲಲನೆ ಅಗ್ನಿಯ । ನೋಡಿ ಕಣ್ಸನ್ನೆಯಲಿಕರೆಯುತ ನುಡಿದಳವನೊಡನೆ ||೧||

ರಾಗ-ಮಧು ಮಾಧವಿ -ತ್ರಿವುಡೆತಾಳ:

ಯಾರು ನೀನೀ ನಿಶಿತಕಾಲದಿ।ಸಾರುತಿಹೆ ಪೂರ್ವಾಭಿಮುಖವೆನೆ । ಮಾರಸುಂದರ ಪೇಳುದಕ್ಷಸು। ಮಾರಿ ಕೇಳುವೆನೆನುತಿರೆ ||೧|| ಅದುಭುತಾನಲ ನಾನು ಕೇಳೆಲೆ । ವಿಧಿ ಮುನಿಗಳಾಹ್ವನವನೆಪೂ। ರ್ವದಗಿರಿಯ ವರಯಜ್ಞಶಾಲೆಗೆ । ಸುದತಿಪೋಪೆನು ಎಂದನೆ ||೧||

ರಾಗ-ಕೇದಾರಗೌಳ-ಝಂಪೆತಾಳ:

ಅನಲನಿಂತೆನೆ ಕೇಳುತ । ಸಂತಸದಿ । ವನಿತೆತಾ ಮನ ಸೋಲುತ । ವಿನುತನಡಿಗಳಿಗೆರಗುತ । ಮನ ಸೋತೆ । ತನುಸುಖವ ನೀಡೆನ್ನುತ ||೧|| ಸುರಸುಂದರಾಂಗ ಕೇಳು । ಅಬಲೆಯಳ । ಹರಣವುಳಿಸು ಕೃಪಾಳು ॥ ಅರಳಶರದುರಿಗೆ ಬೆಂದು । ಬಸವಳಿದೆ । ಕರುಣೆಯೊಳಗೀಕ್ಷಿಸಿಂದು ||೨|| ಸರಸಮಾತುಗಳಾಡುತ । ಬಯಕೆಗಳ । ಪರಿಹರಿಸು ಬಿಗಿದಪ್ಪುತ । ಕರಮುಗಿದು ಬೇಡುತಿಹೆನು । ಮನತಣಿಸು । ಸುರತಸುಖವಿತ್ತೆನ್ನನು ||೩||

ರಾಗ-ಸೌರಾಷ್ಟ್ರ-ತ್ರಿವುಡೆತಾಳ:

ಎಲೆಗೆ ನಿನ್ನೀಪರಿಯ ನಡತೆಯು । ಕುಲಸತಿಯರಾದರಿಗೆ ಸಲುವುದೆ । ಲಲನೆಪೇಳೆನಲಾಗ ಸುದತಿಯು । ಕೇಳೆನುತ್ತ ॥೧॥

ರಾಗ - ಕೇದಾರಗೌಳ - ಝಂಪೆತಾಳ :

ತರಳೆಯರ ಪರಿಣಯವನು । ವಿರಚಿಸಲು । ಸುರಪಾಗ್ನಿಗಳು ಅವರನು । ಸರದಿಯಂತನು ಭುವಿಸುತ । ಬಳಿಕಲಾ । ವರನುಭೋಗಿಸುವುದೆನುತ ॥೧॥ ಪರಿತ್ಯಾಜ್ಯವೆನಗಿದಲ್ಲ । ಶಾಸ್ತ್ರಗಳು। ಒರೆವುದೀ ಪರಿಯೊಳೆಲ್ಲ । ಅರಿತು ಎನ್ನನು ಕೂಡುತ । ಸಂತವಿಡು । ಸುರಿದು ಸುಖಸುಧೆಯೆನ್ನುತ ॥

ರಾಗ - ಸೌರಾಷ್ಟ್ರ - ತ್ರಿವುಡೆತಾಳ :

ವನಿತೆಯಿೂಪರಿಯುಸುರಲನಲನು । ಮನದೊಳಾಕೆಯ ಕೂಟವೊಲ್ಲದೆ । ವಿನಯದಿಂದಾನೊಲ್ಲೆಯೆನಲಾ । ವನಿತೆಯಾಗ ॥೧॥

ರಾಗ-ಕೇದಾರಗೌಳ-ಝಂಪೆತಾಳ :

ಅನಲನೀಪರಿನುಡಿಯಲು । ಸ್ವಾಹೆತಾ । ಕನಲುತ್ತ ಲಿಂತೆಂದಳು । ವಿನಯದಲಿಕೇಳೆದೆನ್ನ । ಮನ್ನಿಸದೆ । ಮುನಿದು ನುಡಿದೆಲವೊ ನಿನ್ನ ॥೧॥ ಮನವ ನೋಯಿಸಿದ ನಿನ್ನ ಬಿಡಲಾರೆ । ನೆನಪಿರಲಿ ಮಾತಿದೆನ್ನ। ಎನಲಾಗಲನಲ ತೆರಳೆ। ನೋಡತಲಿ। ಮನದಿ ಯೋಚಿಸುತ ತರಳೆ ॥೨॥

ರಾಗ-ಮಧು ಮಾಧವಿ - ತ್ರಿವುಡೆತಾಳ :

ಭೋಗಿಸದೆ ಬಿಡಲಾರೆನೀತನ । ಪೋಗುವೆನು ಬೆಂಬತ್ತಿ ಮುನಿಪರ।ಯಾಗಮಂಟಪಕೆನುತ ಪೊರಟಾ। ನಾಗವೇಣಿಯು ನಡೆಯಲು॥೧॥

ವಾರ್ಧಿಕ :

ತರುಣಿಯಳನರಮನೆಗೆ ಕಳುಹಿಖಿಳನಿರದೆ ಸಂ । ಚರಿಸುತಾರಣ್ಯದೊಳಗರಸುತ್ತೆತರೆ ಪೂರ್ವ । ಗಿರಿಶಿಖರದಿಂದಿಳಿವ ತೊರೆಯ ಕಿರುಬಳಿಯಲ್ಲಿ ಬಸವಳಿದು ಬಸಿರಹೊಸೆದು ॥ ಕರೆಕರೆದು ಸಹಚರೆಯಂ ಹಿರಿದಳುವ ಸತಿಯ ಸೌಂ । ದರಿಯಮಂ ಕಂಡುಬೆರಗಾಗಿ ಮನದೊಳು ಬಯಸಿ। ಸರಿದು ಮುಂದಡಿಯಿಟ್ಟು ಸುರಸೇನೆಯಹುದೆನುತ ಕರೆದು ಮಾತಾಡಿಸಿದನು ॥೧॥

ರಾಗ-ನವರೋಜು-ಆದಿತಾಳ :

ಮರುಗಾಬೇಡಲೆರಮಣಿ । ಅರಿತಿಹೆನೆಲ್ಲವ ಸುಗುಣಿ । ಸುರಸೇನೇ ನಿನ್ನಕ್ಕ । ವರಿಸಿಹಳೆನ್ನನು ಒಲಿದು ॥೧॥ ಕಂಜಾಕ್ಷಿ ನಿನ್ನನು ಅಗಲಿ । ನೊಂದಿಹಳೈಮನದಲ್ಲಿ । ಇಂದಾಕೆ ಹೇಳಿದಪರಿಗೆ । ಬಂದಿಹೆನು ಅರಸಿ ಹೀಗೆ ॥೨॥ ನಿನ್ನನು ನೋಡಿದ ಮೇಲೆ । ಮನಸೋತೆ ನಿನಗೆ ಬಾಲೆ ।

ಮುನಿಯದಿರೇ ಬಾಬಾರೆ । ಮನವೊಲಿದೆನ್ನನು ಸೇರೆ ॥೩॥ ತರುಣಿಯೆ ಬಾ ಬಾರೆನುತ । ದುರುಳನು ಮುಂಬರೆತರಳೆ । ತೆರಳತ್ತಾ ಮುಟ್ಟದಿರು । ದುರುಳನೆ ನೀ ತೊಲಗೆನುತ ॥೪॥

ರಾಗ-ಕಾಫಿ-ಝಂಪೆತಾಳ:

ದಡಿಗಾಧಮನೆ ನೀನು । ನುಡಿಯದಿರೆಲವೊ ಹೊಲಸ । ಮಡದಿದಕ್ಕುವಳಲ್ಲ ನಿನಗೆ । ಕೆಡದಿರೆಲವೊ ಖೂಳ । ನಡೆತೊಲಗು ಎನುತಸತಿ । ನುಡಿಯಲಾದನುಜ ತಾನೆಂದ ॥೧॥

ರಾಗ-ಕೇದಾರಗೌಳ-ಅಷ್ಟತಾಳ :

ನುಡಿಯದಿರು ಎಲೆಗೆ ನೀನೀಪರಿಯೊಳರಿಯದೆಯೆ । ಅಡವಿಮಾನಸಕರಸನು । ಕೂಡಿಬದುಕುವ ಮನವ ಮಾಡು ನೀನಲ್ಲದೊಡೆ । ಬಿಡದೆ ಹೊಂದುವೆನೆನ್ನಲು ॥೧॥

ರಾಗ-ತೋಡಿ-ಏಕತಾಳ :

ಮದಮುಖನಿಂತೆನೆ ಕೇಳುತ । ಸುದತಿ ಕೋಪದಿಂದ । ಅಧಮನೆ ತೊಲಗೆನುತ । ಗದರಿಸಲಾದನುಜ ॥೧॥

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಬಿಡೆನೆನುತ ಮುಂದೊತ್ತಿ ಬಂದಾ । ದಡಿಗದಾನವನಿರದೆ ಸತಿಯಳ । ಬಿಡುಮುಡಿಯ ನೆಳೆದಾಡುತಿರಲಾ । ಮಡದಿಯಾಗ ॥೧॥

ರಾಗ-ಬಿಲಹರಿ-ಏಕತಾಳ:

ದುರುಳ ನೀಪರಿ ಮುಂದಲೆ । ಪಿಡಿ । ದಿರದೆಳೆಯುತಿರಲು ಅಬಲೆ । ತರುಣಿ ಮಾನವನುಳಿಸಿರಿ। ಯೆನು । ತಿರದೆ ಬೊಬ್ಬಿಡುತ ಬೆದರಿ ॥೧॥ ಮಾನಸಾರಣ್ಯದೊಳಗೆ । ಇಹ । ದಾನವನಿಂದು ಹೀಗೆ । ಮಾನಹರಣವ ಮಾಳ್ಪನು । ಈ । ಮಾನಿನಿಯ ರಕ್ಷಿಸೆನಲು ॥೨॥

ವಾರ್ಧಿಕ :

ತರಳೆಯೀಪರಿಯಾರ್ತಳಾಗಿ ಮೊರೆಯಿಡಲತ್ತ। ಹರನಕಾಂಬೋಲವಿನಿಂ ಬರುತ ಮಾನಸಗಿರಿಯ। ತರುನೆರಳನಾಂತಿರ್ಪ ಸುಮನಸಾಧಿಪ ಕೇಳು ತೆಳ್ಕೆರ್ತು ತನ್ನ ಮನದಿ ॥ ಕುರಿತು ಚಿಂತಿಸುತಿರಲು ಮತ್ತೆ ಮೊರೆಯಿಡುವದನಿ । ಹರಿದುಬಂದುದು "ಬೇಡ ದಮ್ಮಯ್ಯ ರಕ್ಷಿಸಿರಿ" । ದುರುಳನಿಂದೆನೆ ಸುರಪನ್ನೆತಂದನಾಯೆಡೆಗೆ ದನಿ ಬಂದ ಬಟ್ಟೆವಿಡಿದು ॥೧॥

ರಾಗ-ಭೈರವಿ-ಏಕತಾಳ:

ತ್ರಿದಶಾಧಿಪನ್ನೆತಂದು ।ಖಳ। ಸುದತಿಯನೆಳೆಯಲ್ಕಂಡು । ಎದೆಗೊದೆಯುತಲಾಖಳನ । ಸದ। ಮದದಲಿನುಡಿಸಿದನವನ ॥೧॥ ಪರಸತಿಯಳ ನೆಳೆಯುತಲಿ । ಯಮ । ಪುರಕಯ್ದುವೆ ಮತಿವಿಕಲಿ। ದುರುಳನೆ ಮಡಿಯದಿರೆನಲು । ಸುರ । ರೆರೆಯನೊಳವ ಕನಲುತಲು ॥೨॥ ತಡೆಯುವನಾವನೊ

ನೀನು ।ಗಿರಿ। ಗೊಡೆಯನು ಕೇಶಿಯು ತಾನು । ಬಿಡದೈತಂದರೆ ಮುನ್ನ ।ಜವ। ನೆಡೆಗೆ ಕಳುಹುವೆನು ನಿನ್ನ ।।೩।। ದಡಿಗ ದಾನವನೆ ತಾಳು ।ಸುರ। ಗಡಣಕ್ಕೊಡೆಯನುಕೇಳು । ಮಡದಿಯನು ಬಿಟ್ಟು ಕೆಲಕೆ ।ನಡೆ। ನಡೆಯದಿರು ಯಮನಪುರಕೆ ।।೪।।

ರಾಗ-ಮಾರವಿ-ಮಟ್ಟೆತಾಳ :

ತರಳೆಯಿವಳಬಿಡೆನು ಬೇಡಧುರವು ಸಾರಿದೆ । ಬರಿದೆ ಸಾಯದಿರೆಲೊ ಎನ್ನ ಪರಿಯನರಿಯದೆ ।।೧।। ಎನಲು ಕನಲುತಾಗ ಸುರಪನೆಗಹಿ ವಜ್ರವ । ದನುಜನುರಕೆ ಬಡಿಯಲಾಗ ತಡೆದು ದಾನವ ।।೨।। ಭರದಿ ಗದೆಯಲೆರಗೆ ವಜ್ರದಿಂದ ತಡೆಯುತ । ಶಿರಕೆ ಎರಗೆ ಧರೆಗೆ ಬಿದ್ದ ರುಧಿರಕಾರುತ ।।೩।।

ವಾರ್ಧಿಕ :

ಧರೆಗುರುಳಿದಾದನುಜನಸುವ ಹೀರುವೆನೆನುತ । ಮರಳಿ ವಜ್ರವ ವೆಗಹುತುರವಣಿಸಲಾ ತರಳೆ । ಭರದಿ ತಡೆಯುತ ಕೊಲ್ಲದಿರಿ ಕೊಂದಡೆನ್ನಕ್ಕ ವಿಧವೆಯಾದಪಳೆನ್ನುತ । ವರಮಾನಸದಿವಿಹರಿಸಲ್ಕೆ ಪ್ರಜಾಪತಿಯ । ವರಗುವರಿಯರು ಬಂದೊಡೆನ್ನಕ್ಕವನ್ನೊಲಿಸಿ । ವರಿಸಿಹನು ಕೊಲ್ಲದಿರು ಕಿರಿದುಬಿನ್ನಪವುಂಟು ಆಲಿಸೆನೆ ಪೇಳೆಂದಳು ।।೧।।

ರಾಗ-ಸುರುಟಿ-ಏಕತಾಳ :

ಸುರಸುಂದರ ನೀನು । ಅಸಮನು । ಪರಮ ಪರಾಕ್ರಮನು । ದುರುಳನನೋಡಿಸಿ । ಹರಣವನುಳುಹಿದೆ । ಶರಣೆಂದೆನುತಲಿ । ಕರಗಳ ಮುಗಿಯುವೆ ।।೧।। ಸುರರೆರೆಯನೆ ಎನ್ನ । ಸಹಸಕೆ । ಮರುಳಾಗಿಹೆ ನೆನ್ನ । ಕರುಣೆಯೊಳೀಕ್ಷಿಸಿ । ಕರಪಿಡಿಯುತ ನೀ ।ವರಿಸುವುದೆಂದಳು। ತರಳೆಯುನಾಚುತ ।।೨।। ಮಾರನ ಶರದುರಿಗೆ । ತನುವಿದು । ಗಾರುಗೆಡುತಲಿಹುದು । ಕೋರಿಕೆಗಳ ನೀ ಡೇರಿಸುಯೆನ್ನನು । ಸೇರುತಲೆನಲಸುರಾರಿಯು ನುಡಿದನು ।।೩।।

ರಾಗ-ಘಂಟಾರವ-ಏಕತಾಳ :

ದುರುಳನುಪಟಳದಿಂದ ನಿನ್ನನ್ನು । ರಕ್ಷಿಸಿದ ಕಾರಣ । ತರಳೆ ನೀ ಮಗಳಾದೆಯೆನಗಿನ್ನು । ಹಿರಿತನವ ನೋಡಿದಡೆ ದಕ್ಷನ । ಅರಸಿಯೆನ್ನಯ ತಾಯಿ ಯಾಕೆಯು । ಕಿರಿಯ ತಂಗಿಯ ಮಗಳು ನೀನೆಲೆ । ತರುಣಿ ನೀನೆನಗಿಂದು ಸಹಜೆಯು

ರಾಗ-ಕೇದಾರಗೌಳ-ಝಂಪೆತಾಳ :

ಜಡಜಾಕ್ಷಿ ನೀನೆನಗೆ ತಂಗಿಯಾದುದರಿಂದ । ನಡೆಯದೀ ಮದುವೆಯೆನುತ । ನಡೆ ನಿಮ್ಮಾಲಯಕೆನುತಿರಲಾಗ ಸುದತಿಯು । ಬಿಡದೆ ಮತ್ತಿಂತೆಂದಳು.

ರಾಗ-ಸಾಂಗತ್ಯ-ರೂಪಕತಾಳ :

ಅನುಜೆತಾನಾದೊಡೆ ಅನುನಯ ದೊಳಗನ್ನ । ಮನಕೊಪ್ಪುವಂತ ದುರ್ಜಾಯನ । ಘನಬ್ರಹ್ಮ ನಿಷ್ಠನನು ನೋಡಿ ಮದುವೆಯ । ನನು ಕರಿಸೆನಲು ದೇವೇಂದ್ರ.

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಧುರಪರಾಕ್ರಮಿ ಬೊಂಮನಿಷ್ಮನ । ನರಸಿವಿರಚಿಸು ಮದುವೆಯೆನೆ ನಿನ । ಗಿರುವ ಅರ್ಹತೆಯೇನೆನೆಲಿ ಕಾ । ತರಳೆಯಾಗ ॥೧॥

ರಾಗ-ಮಧುಮಾಧವಿ-ತ್ರಿವುಡೆತಾಳ :

ಸುರಪಲಾಲಿಸು । ವರವಿದಯ್ಯನ । ಸುರನರೋರಗರಿಂದ ಪೂಜೆಯ । ನಿರತ ಕೊಂಬನು ಪತಿಯು ಎನಲಾ । ಸುರರೆರೆಯ ನಿಂತೆಂದನು ॥೧॥

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ತಂಗಿ ನೀನಿಚ್ಛಿಸುವ ವರತಾ । ನೆಂತಿರಲುಬೇಕೆನಲು ಸುದತಿಯು । ತಂದೆ ಕೇಳೆಂದೆನುತ ಪೇಳಿದ । ಳಂದುಮುದದಿ ॥೧॥

ರಾಗ-ಮಧುಮಾಧವಿ-ತ್ರಿವುಡೆತಾಳ :

ದೇವ ದಾನವರುಗಳಗೆಲ್ಲುವ । ಭಾವ ಜಾರಿಯ ಭಕ್ತಕೀರ್ತಿಕ । ಲಾವತಂಸನುದಾರಿಯನು ಸುರ । ದೇವವರಿಸುವೆನೆನುತಿರೆ ॥೧॥

ರಾಗ-ಭೈರವಿ-ಝುಂಪೆತಾಳ :

ತರಳೆಯೆಂದೀಪರಿಯ । ತರಳನನುಕಂಡರಿಯೆ । ಸುರನರರೊಳೆನುತ ಸುರ । ವರನು ಚಿಂತಿಸಲು॥ ಇತ್ತ ಸುರಪತಿ ಚಿಂತಿ ಸುತ್ತಿರಲು ತರಣಿತಾ।ನತ್ತ ಉದಯಾದ್ರಿಯೇ।ರುತ್ತ ಬರುತಿರಲು ॥೧॥

ವಾರ್ಧಿಕ :

ಉದಯಗಿರಿಯೊಳುದೇವದಾನವರ ಯುದ್ದಮಂ । ಉದಯಾರ್ಕನೊಳಗೆ ಶಶಿಪುಗುವುದಂ ವಾಸಿಷ್ಠ । ಮೊದಲಾದ ಸಪ್ತ ಋಷಿಗಳ್ ಕೊಂಡ ಯಜ್ಞದೊಳಗರ್ಪಿಸಿದಹವಿಯಕೊಂಡು ಅದುಭುತಾಗ್ನಿಯು ತರಣಿಯೊಳಗಿಳಿವುದಂ ಪರ್ವ । ಹದಿನಾರು ಮತ್ತೆಂಟು ರವಿಯನರ್ಚಿಸುವುದಂ । ಹೊದೆದರುಣರಾಗದಲಿ ರಂಜಿಸುವ ಸಾಗರನ ಕಂಡು ಸುರಪತಿತನ್ನೊಳು ॥೧॥

ರಾಗ ಸೌರಾಷ್ಟ್ರ-ತ್ರಿವುಡೆತಾಳ:

ತ್ರಿದಶಪತಿತಾನರಿತುಮನದೊಳ । ಗಿದು ಮುಹೂರ್ತವು ಚಂದ್ರಗಥವಾ । ಅಧುಭುತಾಗ್ನಿಗೆ ಪುತ್ರರತ್ನಗ । ಉದಿಸಲುವರು ॥೧॥ ತರಳಯಿಳೆಗೆ ಪತಿಯಹರುಯಿದ । ನರುಹುವೆನು ವಿಧಿಗೆನುತ ಸುದತಿಯ । ಕರವಿಡಿದು ಮರುಸ್ಮಲೋಕವ ನಿರದೆ ಸೇರಿ ॥೨॥ ಪರಮಾತ್ಸರ ಪಸ್ತುಷಮುಕಂ।ಡಿರದೆ ಜಯ ಜಯವೆನುತ ಭಕ್ತಿಯೊ । ಳೆರಗಿನುತಿಸಲು ವಿಧಿಯು ಮೆಚ್ಚುತ । ಸುರಪಗೆಂದ ॥೩॥

ರಾಗ-ಸಾಂಗತ್ಯ-ರೂಪಕತಾಳ :

ಸುರರೆರೆಯನೆ ನಿನ್ನ ಭಕ್ತಿ ಭಾವಗಳಿಗೆ । ಪರಮ ಸಂತುಷ್ಟನಾಗಿಹೆನು । ಭರದಿ ನೀನ್ಯೆತಂದ ಕಾರ್ಯಗಳೇನೆನೆ । ಸುರಪಾಲಕರವ ಜೋಡಿಸುತ ॥೧॥ ಉದಯಾದ್ರಿಯೊಳು ಕಂಡ ಅದ್ಭುತಗಳ ಮತ್ತಾ । ಸುದತಿಯ ಮನದಾಸೆಗಳನು । ಮುದದಿ ಪರಮೇಷ್ಠಿಗೆ ವಿವರಿಸಲಾಗತಾ । ಪದುಮಾಸನನುಯಿಂತೆಂದ ॥೨॥ ಸುರಸೇನೆಗೋರ್ವ ದುರ್ಜಯನಾದ ಪತಿಮತ್ತಾ ಸುರಸೇನಗೋರ್ವ ಸೇನಾನಿ। ದೊರಕುವ ನಿನಿತು ಚಿಂತಿಸಬೇಡ ಪೋಗೆನಲು । ಸುರಪಾಲ ನಮಿಸಿ ಬೀಳ್ಕೊಂಡ ॥೩॥

ವಾರ್ಧಿಕ :

ವಿಧಿಗೆ ಶಾ ಪೊಡಮಟ್ಟು ಬೀಳ್ಕೊಟ್ಟು ಸುರಪರಜ । ತದಗಿರಿಯ ನೇರಿಹರ ಗಿರಜೆಯರ ಹರಕೆಯಿಂ । ಮುದಗೊಂಡುಬರಬರುತ ಲಂಗೀರಸಾದಿ ವರಬೊಂಮ ಋಷಿಗಳ ಯಜ್ಞದ। ಸದನಕೈ ತರಲಲ್ಲಿ ಯಜನದೀಕ್ಷಿತ ಋಷಿಗಳೊದಗಿ ಬಂದುಪಚರಿಸುತುಚಿತಾಸನವನೀಯ । ಲಧಿಕ ಸಂತಸದೊಳಗೆ ಸುರಬಲಗಳ್ಯೆತಂದು। ಮಂಡಿಸಲು ಅದ್ಭುತಾಗ್ನಿ ॥೧॥

ರಾಗ-ನವರೋಜು-ಆದಿತಾಳ :

ಕನಕಮಯ ಕಾಂತಿಯಲಿ । ಅನಲನುನರ್ತಿಸುತಂದು । ಅನುನಯದೀ ಹವ್ಯಗಳ । ಅನಿಮಿಷರಿಂಗೊಲಿದೀಯೆ ॥೧॥ ಸುರಪಾದಿಗಳು ಮನದಿ । ಹರುಷದೊಳಾಮುನಿಗಳನು । ಹರುಸುತಲಿ ಬೀಳ್ಕೊಟ್ಟು । ತೆರಳುತಿರಲನಲನುತಾ ॥೨॥

ವಾರ್ಧಿಕ :

ಸುಪಾದಿಗಳು ತೆರಳುತಿರಲು ಹುತವಹನತಾ । ನಿರದಗ್ನಿ । ಕುಂಡ ಮಂ ಪುಗುವೆನೆಂದೆನುತಲ್ಯೆ। ತಪುತಲಲ್ಲಲ್ಲಿ ಕೈಂಕರ್ಯಮಂ ಕೈಗೊಂಡು ಸುಳಿಯುತಿಹ ಮುನಿವಧುಗಳ । ಕಿರುನಗೆಯ ಕನಪುಗಳ ಹೊಳೆವೆಸಳುಗಣ್ಣುಗಳ । ಪೆರೆನೊಸಲ ಮುತ್ತಿಡುವ ಮುಂಗುರುಳ ಮಾಲೆಗಳ । ಪರೆವ ಕುಚಗಳ । ಭರದಿ ಬಳುಕುವಂಗವ ಕಂಡು ಮೋಹವಶನಾಗಿ ನಿಂದು ॥

ರಾಗ-ಕಾಪಿ-ಅಷ್ಟತಾಳ :

ಅರರೆ ಬಂಣಿಸಲರಿಯೆನೀ ಮುನಿವಧುಗಳಂದವನು । ಹಿಮಕರ । ಗಿರದೆ ಕಾಮನು ತೊಟ್ಟ ಶರದಿಂದಿಳಿದ ಮಧುವೇನು । ಮುಖವಿದು । ಶರದಚಂದಿರ ನಿಂದಿಳೆಗೆ ತಾ ನಿಳಿದನಂತೇನು। ನಾಸಿಕ । ಕಿರಿಯ ಸಂಪಿಗೆ ಕುಸುಮಗಳ ಚೆಲುಚೆಲುವಿನೆಸಳೇನು । ನಿಜವೀ । ಬೆರಗುಗಂಗಳು ಶರಜದಳಗಳು । ಸುರಪಚಾಪವು ಅಧರ ಸೌರಭ । ಭರಿತ ಮಲ್ಲಿಗೆಯೆಲರೆ ರದನಗಳರಿಯೆ ಬಣ್ಣಿಸಲೀಗ ಲಿವರನು ॥೧॥ ವದನ ನಾಲ್ಕಾದವನ ಕುಂಚದ ನವ್ಯಕಲೆಯೇನು । ಕಂಠವು । ಮುದದಿ ಹಾಡುವ ಕೋಗಿಲೆಯ ಪಂಚಮದ ದನಿಯೇನು । ಹೆರಳಿದು । ಮದನನಯ್ಯನ ಮಿತ್ರನಾಭರಣಗಳ ಹೆಡೆಯೇನು । ನಡೆಯಿದು । ಮದಗಜಕೆ ನಡೆಗಲಿಪ ತೆರದಂತಿರುವ ಸೊಬಗೇನು ನಿಜವಿದು । ಮದನನರಗಿಣಿ ರಥಿಗೆಯೇನೆಯೀ । ಷಧಗಳೆನು ಬಯಸದವರುಂಟೇ। ಸುದತಿಯರ ನನು ಭವಿಪುದೆಂತೆನು । ತೊದಗಿ ಚಿಂತಿಸು ತದ್ಭುತನಲನು ॥೨॥

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಹಲವಚಿಂತಿಸುತದ್ಭುತಾಗ್ನಿಯು । ಕೆಲವು ದಿನವಿಲ್ಲುಳಿಯಲೀಮುನಿ । ಲಲನೆಯರ ತಾಕೂಡಬಹುದೆನು । ತುಳಿಯುತಲ್ಲಿ ॥೧॥ ಜಾತವೇದನ ಸೇರಿ ತಾನಜ್ಞಾತನಾಗಿರುತಿರ್ದು ಮುನಿಸಂ । ಪ್ರೀತೆಯರ ಸಂಗವನು ಬಯಸುತ । ಕಾತರದಲಿ ॥೨॥ ಅನುದಿನವು ವರಅಗ್ನಿ ಹೋತ್ರಕೆ । ಮುನಿಗಳನ್ನನುಸರಿಸಿ ಬಂದಾ । ವನಿತೆಯರನು ಸ್ಪರ್ಷಿಸುತತಾ । ಮನದಿ ಸುಖಿಸಿ ॥೩॥ ಕರೆದು ಮಾತಾಡಿಸುವೆನೆನೆ ಮುನಿ । ವರರ ಶಾಪಕೆ ಬೆದರಿಸತಿಯರ । ನೆರೆವುದೆಂತಂದೆನುತ ಚಿಂತಿಸು । ತಿರುತಲಿರಲು ॥೪॥

ವಾರ್ಧಿಕ :

ಮುಡಿದಮಲ್ಲಿಗೆಯೆಲರಕಂಪಿಂಗೆ ನಾಸಿಕವು । ಮಿಡಿಮೊಲೆಯ ನುಣ್ಪಿಂಗೆ ನಯನಗಳು ಪೊಡೆಬಳುಕೆ । ನಡೆಯ ಬೆಡಗಿಗೆ ಕರಣ ಮೆಲ್ನುಡಿಯನಾಲಿಸುತ ಶ್ರವಣಗಳು ಪುಳಕಗೊಂಡು॥ ಸುಡುವ ಕಾಮನ ಅರಳಸರಿಗಳಿಂ ಬೆಂಡಾಗಿ । ತಡೆಯದಾದಿನ ಮಿಂದು ಮಡಿಯುಟ್ಟು ಬಪ್ಪ ಋಷಿ । ಮಡದಿಯುಡೆಯೆಡೆಯೆಡೆ'ಯೊಳಿಡಿಕಿರಿದ ಸೌಂದರ್ಯಮಂ ನೋಡಿ ಚಡಪಡಿಸುತ ॥೧॥

ರಾಗ-ಮಧು ಮಾಧವಿ -ತ್ರಿವುಡೆ :

ತಡೆಯಲಾಗದೆ ವಿರಹದುರಿಯನು । ಸುಡು ಸುಡೀ ಜೀವನವ ಮುನಿಪರ । ಮಡದಿಯರ ಭೋಗಿ । ಸದ ತನುವಿದು । ಸುಡಲಿಯೆನುತ ॥೧॥ ತನುಮನವ ನರ್ಪಿಸಿದೆ ನೀಮುನಿ । ವನಿತೆಯರಿಗಿಂದೀಗ ಲಿವರನು । ಅನುಭವಿಸದಿರೆ ತಾಸಾವೆನಂ । ದೆನುತಲಗ್ನಿ ॥೨॥ ವಿರಹದುರಿಯನು ತಡೆಯದಾತ್ಮವ । ನಿರಿದು ಕೊಂದಪೆನೆನುತ ವನದೆಡೆ । ಹರಿಯೆತಾನಲ್ಲಿರ್ಪ ದಕ್ಷಸು । ವರಿಯುತಾನು ॥೩॥

ವಾರ್ಧಿಕ :

ಮುನಿವಧುಗಳಂಬಯಸಿ ಬಯಕೆಯೀಡೇರದೆಯೆ । ವನದತ್ತ ನಡೆವನಲನಂತರಿಯ ಮನ್ನರಿತು ಮುನಿವಧುಗಳಾವೇಷಮಂಧರಿಸಿ ಬಿಡದಿವನ ಕೂಡಿ ಸುಖ ಪಡೆವೆನೆನುತ ॥ ವನಜ ಮುಖಿ ವಲ್ಕಲವನುಟ್ಟು ಮುನಿಯಂಗೀರ । ಸನಮಡದಿ ಶಿವೆಯವೇಷವ ಧರಿಸಿ ನಡೆತಂದು । ವನದತ್ತ ತೆರಳುತಿಹ ಅದುಭುತನಲನ ತಡೆದು ನಿಲ್ಲೆನುತ ಪದಕೆರಗಲು॥೧॥

ರಾಗ ।- ಕೇದಾರಗೌಳ - ಅಷ್ಟತಾಳ:

ಪದಕೆರಗಿ ನಿಲ್ಲೆನುವ ಸತಿಯಳ ಹರಸುತ್ತ । ಅದುಭುತಾನಲತಾನಂದು । ಮುದದಿಬಂದೆರಗಿದ ಕಾರಣಗಳೇನೆನಲು । ಸುದತಿತಾನಿಂತೆಂದಳು॥೧॥

ರಾಗ-ಸುರುಟಿ- ಏಕತಾಳ:

ಅನಲನೆಕೇಳೆನ್ನ। ಪೇಳುವೆ । ಮನದನುವನುಚೆನ್ನ । ಮನಸೋತಿಹೆನೀನೆನುವುದನರಿತೆವು ಮುನಿವಧುಗಳುಯೆನು । ತನಲಗೆ ನಮಿಸಲು ॥೧॥

ರಾಗ- ಕೇದಾರಗೌಳ-ಅಷ್ಟತಾಳ :

ಸಂಗಸುಖವಾಂಛಿತ ನಿಂದುತಾನೆಂಬುದ | ಅಂಗನೆಯರೆಂತರಿತಿರಿ | ಅಂಗನೆಯೆ ಪೇಳೆನು ತನಲಕೇಳಲು ಮುನಿಯ | ಅಂಗನೆಯು ತಾನೆಂದಳು ||೧||

ರಾಗ-ಸುರುಟಿ-ಏಕತಾಳ :

ದಿನದಿನವುನಿನ್ನ | ನೋಟದ | ಅನುವರಿಯುತಲೆಮ್ಮ | ಮನಸೋತೆವೈನಾ | ವನುನಯದಲಿನೀ| ತನುಬಳಸುತಸುಖ | ವನುನೀಡೆನುತಲಿ ||೧|| ಅಂಗೀರಸನನ್ನು | ಪೊಸಿಹ | ಅಂಗನೆರಿವೆನಾನು| ಅಂಗಜಶರಕಿಂ | ದಂಗವನಿತ್ತೆನು | ಸಂಗಸುಖವನೀ | ಯಂಗನೆಗೀಯೆನೆ ||೨|| ಕಳುಹಲಿಕಾ ಮುನಿಯ | ವಧುಗಳು | ಬಳಿಬಂದೆನು ಇನಿಯ | ತಳುವದೆಯೆನ್ನನು | ಬಳಸುತ ಕಳುಹಲು| ಉಳಿಯದೆ ಪೋಗುತ | ಉಳಿದರ ಕಳುಹುವೆ ||೩||

ರಾಗ-ಕೇದಾರಗೌಳ-ಅಷ್ಟತಾಳ :

ಅಂಗ ಸಂಗವ ಬಯಸಿ ಬಂದಕಾಮಿನಿಯಳ | ಅಂಗ ಸೌಖ್ಯವ ಪಡೆದೊಡೆ | ಸಂಗಡಿಸದುಪಾಪ ದೋಷಗಳು | ಇವಳಂಗ | ಸಂಗವ ಪಡೆವೆನೆನುತಲಿ ||೧||

ವಾರ್ಧಿಕ :

ನುಡಿವಳಂ ಕರಪಿಡಿದು ಬರಸೆಳೆದು ಬಿಗಿದಪ್ಪಿ | ಬಿಡದೆತ್ತಿ ಕೊಂಡೊಯ್ದು ವಾಪಡೆಯ ಪಸುರುಡೆಯ | ಮಡಿಲೊಳೊರಗಿಸಿ ಮಲಗಿ ರಮಿಸಲಗ್ನಿಯ ಸಿಡಿದ ದಿವ್ಯರೇತಸ್ಸುಗಳನು || ಮಡದಿ ಗರ್ಭದಿ ಧರಿಸದಂಜಲಿಯೊಳಡಗಿಸುತ | ನುಡಿವಳಾಲಿಂಗಿಸುತ ದಾಹವಡಗಿತು ಮುನಿಯ | ಮಡದಿಯ ನೊರೋರ್ವರಂತೆ ಕಳುಹುವೆನುತ ಪೊಡಮಟ್ಟು ಪೊರಟು ಬಳಿಕ||೧||

ರಾಗ-ತೋಡಿ -ರೂಪತಾಳ :

ವನಿತೆಯಂಜಲಿಯೊಳಗೆರೇತಸ್ಸುಗಳ ಧರಿಸಿ| ವನದೊಳಗೆ ನಡೆದು ಬರುತಿರಲು | ವನಜ ಮುಖಿಯನು ಕಂಡು ಮೋಹ ಪರವಶನಾದ | ವನಚರನು ತಿಮ್ಮನೈ ತಂದು ||೧||

ರಾಗ-ಮುಖಾರಿ-ಆದಿತಾಳ :

ಯಾರಮ್ಮ ನೀನು ಮಹರಾಯ್ತಿ | ಕಾಡಿನೊಳಾಗೆ | ಯಾರಮ್ಮ ನೀನು ಮಹರಾಯ್ತಿ ||ಪ|| ಮೋರೆಸಿಂಗಾರವಾಗಿ ಐತೆ | ಯಾರೆಲೆ ನಿನ್ನ | ಸ್ವಾರೀಯೆಲ್ಲಿಗೆ ಹೋಗುತ್ತೈತೆ | ನಾರಿಯೆ ನಿನ್ನವ | ರ‍್ಯಾರೆಲೆಪತಿನಿನ | ಗ್ಯಾರು ಪೇಳೆಲೆ ನಿ | ನ್ನೂರ‍್ಯಾವುದು ಐತೆ | ಗ್ಯಾರಿಹರೊರೆಯಲೆ | ವಾರಿಜ ಮುಖಿನೀ | ನ್ಯಾರೆಂದೆ ನುತಲಿ | ಕಾರ್ಯವೇನೈತನೆ ||೧||

ರಾಗ-ಸೌರಾಷ್ಟ್ರ-ತ್ರಿವುಡತಾಳ :

ವನಚರನ ಬೀಭತ್ಸರೂಪವ | ವನಜಮುಖಿ ನೋಡುತಲಸಹ್ಯದಿ | ಕನಲಿನುಡಿದಳು ಕೆಟ್ಟವನೆ ನಡೆ | ಯೆನುತಲಾಗ ||೧||

ರಾಗ -ಮುಖಾರಿ-ಆದಿತಾಳ :

ಮುನಿಯಾಬೇಡಲೆ ಹೆಣ್ಣೇ ನೀನು । ಬೇಡ್ಕೊಂತಿವ್ನಿ । ನಿನ್‌ಮ್ಯಾಗೆಮನ್‌ಸೀಗಾಗ್ಯೆತೆ । ಮುನಿಸುಯಾಕೆ ನಿನ । ಗಿನಿಸೆನ್ನೊಳು ಮನ । ಕನಸ ಕಾಣ್ಯೆತೆ । ನೆನೆದು ಬಯಸ್ತೀತೆ । ಮನವು ನಿನ್ಮ್ಯಾಗೆ । ಘನವಾಗ್ಯೆತಲೆ । ಮನಿತಾವ್ಕೆ ಬಾರೆ । ಮನಿಯಾಕಿಯಾಗೆ ||೧||

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ವನಚರನ ನುಡಿಕೇಳಿ ಸ್ವಾಹೆಯು । ಮನದೊಳವಿವೇಕಿಯನು ಕಳುಹುವೆ । ನೆನುತ ಚಿಂತಿಸುತೊಂದು ಪಾಯವ । ವನಿತೆಯಾಗ ||೧||

ರಾಗ-ತೋಡಿ-ರೂಪಕತಾಳ :

ಸರಸಿಜ ಮುಖಿಯೆಂದಳೆಲೆವನಚರ ನಿನ್ನ । ವರರೂಪವನು ಮೆಚ್ಚಿದೆನ್ನ । ವರಿಸಿಕೊ ದಣಿದು ಬಂದಿಹೆ ನೆನಗೊಂದಿಷ್ಟು । ತರಿಸಿ ಕೊಟ್ಟೀಗ ಜೀವನವ ||೧|| ಎನಲು ವನಚರನಾಗ ಪಿರಿದು ಸಂತಸದಿಂದ । ಕುಣಿದು ನೀರ್ತರ್‍ತಿವ್ನಿ ಎಂದು । ವನದೊಳಗೆ ತೆರಳಲಿಕಿತ್ತ ಸ್ವಾಹಾದೇವಿ । ಮನದೊಳಗಂದು ಚಿಂತಿಸುತ ||೨||

ವಾರ್ಧಿಕ :

ವನನಿವಾಸಿಗಳೆನ್ನ ನೀವೇಷದಲಿ ನೋಡೆ । ಮುನಿವಧುಗಳಿಂಗಿಂದು ಅಪಖ್ಯಾತಿ ಬಹುದೆನುತ ನೆನೆದೊಂದು ಗರುಡನಾಕಾರಮಂ ತಳೆದಗ್ನಿವೀರ್ಯಮಂ ನೆಗಹಿಪಿಡಿದು || ಘನವೇಗದಲಿ ಹಾರಿ ಬಂದು ಶ್ವೇತಾದ್ರಿಯಲಿ । ಅನವರತ ಘೋರಾಹಿಯಿಂದ ರಕ್ಷಿತಮಪ್ಪ । ಕನಕಮಯ ಕುಂಡದೊಳಗಗ್ನಿ ವೀರ್ಯವ ನಿರಿಸಿ ಬಂದಗ್ನಿಯಿರ್ಪವನಕೆ ||೧||

ರಾಗ-ತೋಡಿ-ರೂಪಕತಾಳ :

ಇತ್ತವನಚರ ಪರ್ಣದೋಣೆಯಲಿ ಜೀವನವ । ಹೊತ್ತು ಕೊಂಡಿತ್ತ ಬರಬರುತ । ವೃತ್ತಕುಚೆಯಳಕಾಣದಿವಳು ವಂಚಕಿಯೆನುತ । ಲತ್ತ ನಡೆಯಲು ಬಳಿಕಲಿತ್ತ ||೧||

ವಾರ್ಧಿಕ :

ಗರುಡನಾಕಾರಮಂ ಕಳೆಯುತ್ತಲತ್ರಿಮುನಿ । ವರನ ಮಡದಿಯ ವೇಷಮಂಧರಿಸಿ ಬಂದಗ್ನಿ । ಗೆರಗಿ ವಿನಯದಿ ಕಣ್ಣ ನೋಟದಲಿ ಕಾಮಿತವ ನೀಡೇರಿಸಲು ಅನಲ || ತರಳೆಯಂ ಬಿಗಿದಪ್ಪಿ ಮೈದಡವಿ ಮುದ್ದಿಸುತ । ಬರಲು ತಡವೇಕೆನಲು ಕಾಮಿನಿಯು ನುಡಿದಳೆಲೆ । ಪುರುಷನರಿಯದ ತೆರದಿ ಬರುವೆನೆನೆ ತಳುವಿದೆನು ಮುನಿಯದಿರು ಮನ್ನಿಸೆನಲು ||೧||

ರಾಗ-ನೀಲಾಂಬರಿ-ಏಕತಾಳ :

ಮುನಿಸು ನಿನ್ನೊಳಗಿಲ್ಲ ಕೇಳೆಲೆ । ನಿನಗಾಗಿ ಕಾದು । ವನದೊಳಗೆ ಬೇಸತ್ತಯಲೆಬಾಲೆ । ವನಜ ನೇತ್ರೆಯ ನಿನ್ನ ವಿರಹವೆ । ಬಳಲಿಸಿ ತನ್ನ । ತನುವನೀಪರಿ ನೋಡೆಲೆ ಚೆಲುವೆ || ಎನೆ

ನಸುನಗು ತೆಂದಳೆಲೆ ಚೆನ್ನ । ನಿನ್ನನು ಕಾಣ । ಲೆನಿತು ಬಂದಿಹೆನೀಗ ಬನ್ನ । ಇನಿಯ ನಿನ್ನನು ಕೂಡ ಬಯಸಿ । ಬಂದಿಹೆನೀಗ । ತನುವನಪ್ಪಿಕೊ ಬಾರೊ ಸರಸಿ ॥೨॥

ಭಾಮಿನಿ :

ಚತುರವೈಣಿಕ ವೀಣೆಯನು ಬಲು । ಜತನದಲಿತಾ ತೊಡೆಯೊಳೇರಿಸಿ । ಶ್ರುತಿ ಗೊಳಿಸಿ ಶೃಂಗಾರ ಕಾವ್ಯವ ನುಡಿಸುವಾ ತೆರದಿ ॥ ಅತಿಶಯದ ಪ್ರೀತಿಯಲಿ ಮುನಿಪನ । ಸತಿಯನನುಪಮ ತೊಡೆಯೊಳೇರಿಸಿ । ರತಿಕಲಾ ಶೃಂಗಾರ ಕಾವ್ಯದ ಮಡಿಸೆಹುತ ವಹನ ॥೧॥

ವಾರ್ಧಿಕ :

ಕಾಮಿನಿಯೊಳೊಂದಾಗಿ ಬಿಗಿವಡೆಯೆ ಹರಿದವರ । ಕಾಮರಸಮಂ ತನ್ನ ಕರಪುಟದೊಳಿರಿಸಿ ಗಜ । ಗಾಮಿನಿಯು ಸುರತದಿಂಬಸಗೆಟ್ಟ ಅನಲನಿಂಗೆರಗಿ ವನದತ್ತ ನಡೆದು ಭಾಮಿನಿಯು ಗರುಡನಾಕಾರಮಂ ತಳೆಯುತ್ತ ವ್ಯೋಮಪಥದಲಿ ಧವಳಗಿರಿಯತ್ತ ಸಾಗೆವನ । ಧಾಮ ದೊಡೆಯನ ಬಾಣಸಿಗನೋರ್ವ ಕವಣೆಯಿಂ ಕಲ್‌ವೀಸಿ ತಡೆಯುತಂದು ॥೧॥

ರಾಗ-ಮುಖಾರಿ-ಆದಿತಾಳ :

ಹಿರಿದು ಹಕ್ಕಿಯ ನೋಡುತಂದು । ನಮ್ಮೊಡೆಯನಿಗೆ । ಸರಿಯಾದ ತಿನಿಸು ದೊರೆಯಿತೆಂದು ॥ಪ॥ ಸರಿದು ಮುಂದಕೆ ಬಂದು ನೋಡಿ । ಕವಣೆಯಹೂಡಿ । ಮುರಿದೂ ಗುರಿಯನ್ನು ಸರಿಮಾಡಿ । ಹಿರಿದು ಹಕ್ಕಿಯನು । ಇರಿದು ಪಿಡಿಯುತಲಿ । ಮುರಿದು ಕೊರಳನಿರ । ದುರವಬಗಿದು । ಎಳೆ । ಗರುಳ ತುಪ್ಪದಲಿ । ಹುರಿದು ಎಲುಬುಗಳ । ಕರಿದು ಕೊಡುವೆ ನಾ। ಹಿರಿಯೊಡೆಯನಿಗೆನೆ ॥೧॥

ವಾರ್ಧಿಕ :

ದುರುಳನೀತನು ಯೆನ್ನ ನಿರಿಯದಿರನೆಂದೆನುತ । ಗರುಡನಾಕಾರಮಂ ತಳೆದಿರ್ಪ ತರಳೆತಾ । ನಿರದೆ ವೇಗದೊಳೆರಗಿ ಬಾಣಸದ ಬವರಿಗನ ನಯನಗಳ ಕೊರೆದು ಕಿತ್ತು ॥ ಭರದಿ ಮುಂದೊತ್ತಿಸಿತ ಪರ್ವತದ ಕನಕಮಯ । ವರಕುಂಡದೊಳಗಗ್ನಿವೀರ್ಯಮಂಬೈತಿರಿಸಿ । ಮರಳಿ ಬಂದಳು ತರಳೆ ಗೌತಮನ ಪ್ರಿಯಸತಿಯ ವೇಷದಲಿ ಅಗ್ನಿಯೆಡೆಗೆ ॥೧॥

ರಾಗ-ನವರೋಜು -ಆದಿತಾಳ :

ಅನಲನ ಕಂಡಡಿಗೆರಗಿ । ವಿನಯುಮಿಗೆ ತಲೆವಾಗಿ । ಮನಸೋತು ಬಂದಿಹೆನಾ । ಮನದಿಷ್ಟಾನೀಡೆನಲು ॥೧॥

ರಾಗ-ಸೌರಾಷ್ಟ್ರ-ತ್ರಿವುಡೆ :

ಮಾನಿನೀ ಮಣಿ ನಿನ್ನ ಬಿರುವು ನಿ । ದಾನ ಮಾಮದೆ ಪತಿವ್ರತಾವ । ಧೂನಿವಹ ದೂಷಿಸದೆ ಪೇಳು ನಿದಾನವೆನಲು ॥೧॥

ರಾಗ-ನವರೋಜು-ಆದಿತಾಳ :

ಎನಕೇಳಿಗೌತಮ ಸತಿಯು । ಅನಲನೆ ಯಮ್ಮನು ನೀನು । ಮುನಿವಧುಗಳೆಂದರಿತೂ । ಮನಸೋತುದೆಂತೆನುತ ॥೧॥ ಬಿಡುಬಿಡು ಚಿಂತೆಯನೆನುತ । ಜಡಜ ಮುಖಿ ಬಿಗಿದಪ್ಪಿ । ನಡುಬಳಸೇ ಕಡು ಸುಖದ । ಕಡಲೊಳಗೋಲಾಡುತಿರೆ ॥೨॥

ವಾರ್ಧಿಕ :

ಮೈಥುನದೊಳಗ್ನಿ ವಿಸ್ಫುರಿತವೀರ್ಯವ ಕರದ । ಮೈಥುನದೊಳಿರಿಸಿ ವರ ಸುರತದಿಂ ಬಸಗೆಟ್ಟು। ಶೈಥಿಲ್ಯಮಾದಗ್ನಿಗೆರಗಿ ಗೌತಮ ಸತಿಯು ಪೊರಮಡಲ್ಕಾಗಲಿವರ । ಮೈಥುನವ ಕಂಡೋರ್ವ ಕಾನನದ ಮುದುಕಿತಾ । ಮೈಥುನದೊಳಗ್ನಿಯಂ ಕೂಡ ಬಯಸುತ ಮನೋ । ವ್ಯಥೆಯ ನೊರೆದಪೆನಾತಗೆನುತಲಾಗ ಸುಶೀಲೆ ನಡೆತರುತಲಗ್ನಿಯೆಡೆಗೆ ॥೧॥

ರಾಗ-ಮಿಶ್ರ ತೋಡಿ-ಅಷ್ಟತಾಳ :

ವನಜಾಂಬಕನಡಿಗೆರಗಿ । ಬಂದೆ । ವಿನುತನೆನಾನಿನಗಾಗಿ । ನನೆಮೊನೆಗಳು ಬಂದು ತಾಗಿ । ನೊಂದೆ । ನೆನುತ ವಿನಯದಿ ತಲೆಬಾಗಿ । ಮನದಿನಿಯನೆ ನೀನೊಲಿಯು ತೆನ್ನನು ಸೇರೆನುತಲಿರದೆ ಕಾಮಿನಿ ಮಗುಳಿಂತೆಂದಳು ॥ ನಾರೀತನುವನೊಮ್ಮೆ ಮುಟ್ಟು । ನೋಡು । ಭಾರವಾಗಿದೆ ಎದೆ ಕಟ್ಟು । ಸಾರಿಬರುತ ಮುತ್ತನಿಟ್ಟು । ಉಳಿಸು । ಮಾರಶರಗಳನ್ನು ಸುಟ್ಟು । ನಾರಿಯೆನ್ನನು ಹೀಗೆ ಕಾಡಿಸಬೇಡವಿ । ಚಾರಿಸೆನಲು ಮನದೊಳು ನಗುತನಲನುತಾ ॥೨॥

ರಾಗ-ಸಾಂಗತ್ಯ-ರೂಪಕತಾಳ :

ಲೇಸನಾಡಿದೆ ಕೇಳು ಮಾನಿನೀಮಣಿ ನೀನು । ಏಸುಧನ್ಯನೊ ಜಗದಿನಾನು । ಈ ಸೊಂದು ಭಾಗ್ಯ ವಿನ್ನಾರ ಪಾಲಿಂಗಿಹುದು । ತೋಷವಾದುದು ಮನಕ್ಕೆನುತ ॥೧॥ ಧವಳಕಾಂತಿಯ ಕಚ ನೂರುನಿರಿಗೆಯ ಮುಖ । ಪವಳಕೋದಂತಿರ್ಪರದನ । ಭವದೊಳಗರ್ಜಿಸಿದ ಪುಣ್ಯಗಳ ಸಾಕಾರವು । ಭುವನ ಸುಂದರಿ ದೊರೆತೆಯೆನಲು ॥೨॥

ರಾಗ-ಮಾರವಿ- ಝಂಪೆತಾಳ :

ಚಿತ್ತಜನ ಶರದಬಲು । ವೊತ್ತವಾದೆನ್ನ ಮುದಿ । ತೊತ್ತು ಎಂದೆನುತ ಮದ । ಮತ್ತಜರೆದೆಯಲ ॥ ಉತ್ತಮನು ನೀನೆಂದು । ಮತ್ತಕಾಶಿನಿ ಬಂದೆ । ಮತ್ತೆನುಡಿದರೆ ನಿನ್ನ । ಚಿತ್ತವಿಳಿಸುವೆನು ॥೧॥ ದುರುಳೆಯಿಂತೆನಲನಲ । ನಿರದೆ ತೊಲತೊಲಗೆನಲು । ಕೆರಳುತೆಂದಳು ವನಿತೆ । ಸುರಬಾಣಸಿಗಗೆ ॥ ಸುರತದೊಳು ನಿನ್ನನಾ । ನೆರೆಯದಿರೆ ಹೆಣ್ಣಲ್ಲ । ಮರೆಯದಿರು ಎಂದೆನುತ। ಪೊರಮಡಲ್ಕಾಗ ।

ಭಾಮಿನಿ :

ಇತ್ತ ಗರುಡಾಕಾರದಲಿಗಿರಿ। ಯತ್ತಸಾಗಿದ ತರಳೆ ಗಿರಿಯನು ಹತ್ತಿ ಅಲ್ಲಿಹ ಕನಕಮಯ ಕುಂಡದೊಳಗಾಶಿಖಿಯ । ಸತ್ವವನ್ನಿರಿಸುತ್ತ ಮರಳಿದು । ಮತ್ತೆ ಮುನಿಜಮದಗ್ನಿ ಮಡದಿಯ। ನುತ್ತಲಾಕೆಯವೇಷದಲಿ ಬಂದಗ್ನಿಯಡಿಗೆರಗಿ ||೧||

ರಾಗ-ತುಜಾವಂತು ಝಂಪೆ :

ಅನಲಕೇಳಯ್ಯನಾಜಮದಗ್ನಿಮಡದೀ । ಇನಿಯನಿವಗಾಗೀಗ ಬಂದೆ ಸಡಗರದೀ । ಮುನಿಪನಾಶ್ರಮದೊಳಗೆ ನಿನ್ನನು ನೋಡಿ । ಮನವನಿತ್ತೆನು ನಿನಗೆ ರಮಿಸೆನ್ನಕೂಡಿ ||

ರಾಗ- ಮಧ್ಯಮಾವತಿ-ತ್ರಿಪುಡೆತಾಳ :

ಮುನಿವಧುಗಳತಿಶ್ರೇಷ್ಠರಿವರನು । ಅನುಭವಿಸೆನಾ ಪಾಪಿಯಾದಪೆ । ನೆನುತಚಿಂತಿಸುತಲಾಗ ಸತಿಯನು । ಅನುನಯದೊಳಿಂತೆಂದನಲೆ । ವನಿತೆ ಕೇಳು ||೧|| ಧರೆಯೊಳಗೆ ಸ್ತ್ರೀಪುರುಷಮಿಲನವು । ತರಳರನು ತಾಪಡೆಯಲೋಸುಗ । ಹೊರತುಕಾಮದ ತೃಪ್ತಿಯಾನಿಂಗಿಸ ಲರಿದು ಪಾತಕ ವೆಂಬರನೆ । ತರಳೆಯಾಗ ||

ರಾಗ- ಸಾಂಗತ್ಯ -ರೂಪಕತಾಳ :

ಅರಿಯೆನು ನಾನಿಂದು ಧರ್ಮ ಕರ್ಮಗಳನ್ನು । ಒರವೇಕೇಳೊಂದು ಮಾತನ್ನು । ಹಿರಿದಾಕರ್ಷಣೆಯನೆನ್ನೊಳಗೆ ಸೃಷ್ಟಿಸಿದಂತ । ಹರಿನೋಡಿಕೊಂಬಧರ್ಮಗಳ ||೧|| ನಾನಾಗಿ ಬಯಸಿ ಬಂದಿಹೆನು ನಿನ್ನಯ ಧರ್ಮ। ಹಾನಿಯಾಗದು ಕೇಳೆನುತ । ಏನಾದರಾಗಲಿ ಕೂಡಿ ಸಂತಸಪಡುವ । ನಾನೋಡಿಕೊಂಬೆ ಬಪ್ಪುದನು ||೨||

ವಾರ್ಧಿಕ :

ನುಡಿವಾಕೆಯಂಪಿಡಿದು ಸಮರತಿಯಳೊಂದಾಗು । ತನಲನೊದಗಲು ಹರಿದ ವೀರ್ಯವನು ಕರಪುಟದ । ಮನೆಯಳಿರಿಸುತ ರೇಣುಕಾದೇವಿ ತೃಪ್ತಿಯಿಂದನಲನಿಂಗೆರಗಿ ಪೊರಮಡಲು । ಅನಲನಿಂ ತಿರಸ್ಕಾರ ದವಮಾನದಲಿ ಬೆಂದ । ವನದ ಮುದುಕಿಯು ಕಟುತರಖತಾ ವನದೊಳಿಹ ಮನೆಯಸೇರುತ ತನ್ನಪತಿಯಿಂದಲೀತನಿಗೆ ಶಾಸ್ತಿಯಂ ಮಾಡಿಸುವೆನೆನುತ ||೧||

ರಾಗ- ಸೌರಾಷ್ಟ್ರ- ತ್ರಿವುಡೆ ತಾಳ :

ಇತ್ತಮಡದಿಯವಸ್ತ್ರಗಳ ನೊಗೆ । ಯುತ್ತಲಿರುವಾ ಸೋಮನಿಂಗರ । ಗುತ್ತ ಪೇಳದಕಾಮವು। ಮತ್ತೆಯಾಗ ||

ರಾಗ- ಕಾಂಭೋಜ- ಝಂಪತಾಳ :

ಚೆನ್ನಿಗನೆ ಕೇಳಯ್ಯ ಎನಗೊದಗಿದವಮಾನ । ವನ್ನು ಪೇಳುವೆನಿಂದು ನಿನಗೆ । ಬಣ್ಣನೆಯ ಮಾತಲ್ಲ ವನಮಧ್ಯದೊಳಗೋರ್ವ । ಚಿಣ್ಣ ನೋಡುತಕಣ್ಣು ಹೊಡೆದ ||೧|| ಬಾರನ್ನಲರಗಿಣಿಯೆ

ಬಾರೆಲಲನಾ ಮಣಿಯೆ । ಬಾರ ಮದನನರಾಣಿಯೆನುತ । ಬಾರೆನವಮಲ್ಲಿಗೆಯೆ । ಬಾರ ನೀಲೋತ್ಪಲವೆ । ಬಾರೆನುತಸುರತಕ್ಕೆ ಕರೆದ ।।೧।। ಮತ್ತೆ ಕೈ ಮುಟ್ಟಿ ಕರಪಿಡಿದು ಎಳೆಯಲ್ಕಾಗ। ಕತ್ತೆತ್ತೊಲಗೆಂದು ನಾನುಡಿಯೆ । ಒತ್ತಿ ಪಿಡಿಯುತಲೆನ್ನ ಮುತ್ತಿಕ್ಕಿ ಎಲೆಗೆಮುದಿ । ತೊತ್ತೆ ನಡೆ ನಡೆಯೆನುತಜರೆದ ।।೩।। ದುರುಳನನು ಸೆರೆಪಿಡಿದು ಕಟ್ಟಿತಂದೆನ್ನ ಪದ । ಕೆರಗಿಸಲು ಬೇಕು ನೀನೆನಲು । ಮರುಗದಿರು ನಿನ್ನ ಜರೆದವನ ಪಿಡಿತರುವೆನೆನು । ತಿರದೆ ಪೊರಮಡೆ ಸೋಮ ನಾಗ ।।೪।।

ವಾರ್ಧಿಕ :

ಇತ್ತ ತರಳೆಯು ಗರುಡನಾಕಾರದಲಿ ಗಿರಿಯ । ನುತ್ತರಿಸಿಹುತವಹನ ವಿಸ್ಫಲಿತ ವೀರ್ಯವನು। ಮತ್ತೆ ಮುಂನಿನ ತೆರದೊಳಲ್ಲಿರುವ ಸ್ವರ್ಣಮಯ ಕುಂಡದೊಳಗಿರಿಸಿ ಬಳಿಕ ।। ಒತ್ತರಿಸಿ ಬಂದಗ್ನಿಯಿರ್ಪವನದೆಡೆಗೆ ಮುನಿ । ಪೋತ್ತಮನ ಭರದ್ವಾಜನರ್ಧಾಂಗಿ ವೇಷದಿಂ । ದತ್ತ ನಡೆದಳು ವಿಟರ ಎದೆಯ ಸೀಳುವ ಹೊನ್ನ ಹೊಸಮಸೆಯಕುಲಿಶದಂತೆ

ರಾಗ-ಬೇಗಡೆ- ಏಕತಾಳ :

ವನಿತೆಯನಲನ ಪಾದಗಳಿಗೆರಗಿ । ಯಿಂತೆಂದಲೆನಾ । ಮುನಿಪಭಾರದ್ವಾಜನರ್ಧಾಂಗಿ । ಘನನೆ ನಿನ್ನಯ ಲೋಕ ಮೋಹಕದನುಪಮದರೂಪವನು ಕಾಣುತ । ಮನವು ಪರವಶವಾಯ್ತು ನಿನ್ನೊಳು ಇನಿಯ ಮನದಿಷ್ಟಾರ್ಥ ಸಲ್ಲಿಸೊ ।।೧।।

ರಾಗ -ಕೇದಾರಗೌಳ-ಅಷ್ಟತಾಳ :

ಎರಗಿ ವಂದಿಪ ತರುಣಿಯಳನು ಪಿಡಿದೆತ್ತು । ತೊರೆದನೆಲೆ ತರುಣಿ ನಿನ್ನ । ಬರವು ನಿನ್ನಪತಿಗಳಿಗರಿತರೆ ನೀನು । ತರುಣಿ ಮುಂದೇನ ಗೈವೆ ।।೧।।

ರಾಗ -ಬೇಗಡೆ-ಏಕತಾಳ :

ಜಡಜ ಮುಖಿಯಾ ಮಾತುಗಳ ಕೇಳಿ । ವಿನಯದಲಿ ಕೈಮುಗಿ। ದೊಡನೆಯೆಂದಳು ಕೇಳು ಗುಣಮೌಳಿ ।। ಬಿಡು ಬಿಡೇತಕೆ ಚಿಂತಿಸುವೆ ಮುನಿ । ಗಡವಗೆನ್ನಯ ವಿಷಯ ವರಿತರೆ । ಗೊಡವೆಯಿಲ್ಲದೆ ಅನುದಿನವುನಿ । ನ್ನಡಿಗಳನು ಸೇವಿಸುತ ಬದುಕುವೆ ।।೧।।

ವಾರ್ಧಿಕ :

ನುಡಿಯಿಂಪು ನಡೆಬೆಡಗು ಕಡೆಗಣ್ಣ ಕುಡಿನೋಟ । ಬಿಡುಮೊಲೆಯ ಕಡುಬಿಣ್ಪು ಜಡಿವಜಘನದ ಪೆಡಸು । ಬಡನಡುವಿನೆಡೆ ಪೊಡೆಯೊಳೊಡೆದ ತ್ರಿವಳಿ ಮಡಿಕೆ ಬೆಳ್ದೊಡೆಯ ನುಣುಪ ಕಂಡು। ಸುಡುವ ಕಾಮನ ಅರಳ ಸರಳ ಕಡುಕಾಯ್ಪಿಂಗೆ । ನಡುಗಿ ಬೆಮರಿಡೆ ಮಡದಿಯಂ ತುಡುಕಿಪಿಡಿಯುತೊಡ । ಲೊಡಲೊಳಡಗಿಸಿ ತೊಡಗೆ ಸಿಡಿದ ಕಿಡಿಯಂ ಪಿಡಿದು ಮಡದಿ ಪೊಡಮಟ್ಟು ಪೊರಡೆ ।

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಇತ್ತ ಮಡದಿಯ ಮಾತಕೇಳುತ । ಕತ್ತಿದೊಣ್ಣೆಯ ಪಿಡಿದು ಸೋಮನು । ಸುತ್ತಣಡವಿಯ ಹುಡುಕಿ ಬರುತಿರ । ಲಿತ್ತಲಿವರ ||೧|| ಕಂಡು ಕೇಳಿದ ನೆಲವೊ ಧೂರ್ತನೆ । ಕಂಡ ಕಂಡರ ಮಡದಿ ಯರನೀ । ಕಂಡು ಸುರತಕೆ ಕರೆವನ್ಯಾರೆಲೊ । ಭಂಡ ನೀನು ||೨||

ರಾಗ-ಮಧ್ಯಮಾವತಿ-ತ್ರಿವುಡೆತಾಳ :

ಎಲವೊ ನೀನಾರೆಂಬು ದರಿಯೆನು । ಒಲಿದು ಬಂದರೆ ಕೂಡಿದೆನು ನೀ । ಮುಳಿದು ನುಡಿಯುವುದೇಕೆ ನಿನ್ನಯ । ಲಲನೆಯನ್ನೆಳೆದಿಹೆನೆ ಪೇ । ಳೆಲವೋಯೆನಲು ||೧||

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಅಲ್ಲದುಂಟೇ ಎನ್ನ ಮಡದಿಯ । ಮೆಲ್ಲ ಕಣ್ಸನ್ನೆಯಲಿ ಕರೆಯುತ । ಒಲ್ಲೆನೆಂದರೆ ಗಲ್ಲವೊತ್ತಿದೆ ಖುಲ್ಲ ನಿನ್ನ ||೧|| ನಿಲ್ಲು ಹೆಡೆಮುರಿ ಗಟ್ಟಿನಿನ್ನಯ । ಖುಲ್ಲತನವನು ನಿಲ್ಲಿಸಿಯೆನ್ನಯ । ನಲ್ಲೆಯಳ ಪದಕೆರಗಿಸುವೆ ಚಣ । ದಲ್ಲೆಯೆನಲು ||೨||

ರಾಗ-ಕೇದಾರಗೌಳ-ಅಷ್ಟತಾಳ :

ಎನಲು ನಸುನಗುತನಲ ನೆಂದನೆಲವೊ ನಿನ್ನ । ವನಿತೆ ತಾನೇ ಮೋಹದಿ । ಮನಸೋತು ಬಂದೆನ್ನ ಕೂಡೆಂದು ಪೀಡಿಸಲು । ಕನಲಿಕಳುಹಿದೆ ಜರೆಯುತ ||೧||

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಎನ್ನುವಗ್ನಿಯ ಮಾತಕೇಳುತ । ಮನ್ನಿಸೆಂದಡಿಗೆರಗಿ ನಡೆದನು । ಕುನ್ನಿ ಎನ್ನನು ಕೊಂದನೆನ್ನುತ ತನ್ನಮನೆಗೆ ||೧||

ವಾರ್ಧಿಕ :

ಕಾಮಿನಿಯು ತಾನಿತ್ತ ಖಗವಾಗಿ ಶ್ವೇತಗಿರಿ ।ಧಾಮದೆಡೆಯನು ಸಾರಿ ತದ್ಗಿರಿಯೊಳಿರ್ಪ ವರ । ಸೋಮ ಮಯ ಕುಂಡದೊಳ ಗನಲವೀರ್ಯವ ನಿರಿಸುತಲ್ಲಿಂದ ಪೊರಟು ಬಳಿಕ || ಭಾಮಿನಿಯು ಮತ್ತನಲನ ನಿರ್ಪವನದೆಡೆಗೈದು । ತಾಮುನಿಪ ಕಶ್ಯಪನ ಮಡದಿಯಳ ವೇಷವನು । ನೇಮದಿಂದಳವಡಿಸಿ ಬಂದು ಅಗ್ನಿಯ ಪಾದಗಳಿಗೆರಗಿ ವಿನಯದಿಂದ ||೧||

ರಾಗ-ತೋಡಿ-ರೂಪಕತಾಳ :

ಅನಲಕೇಳೆನ್ನ ನಾ ಮುನಿಪ ಕಶ್ಯಪ ಮಡದಿ । ಮನಸೋತು ಬಂದೆ ಸಡಗರದಿ । ವಿನುತ ನಿನ್ನನು ಕೂಡಬೇಕೆಂದು ಸಂಭ್ರಮದಿ । ವನಿತೆ ಬಂದಿಹೆನೆಂದು ಮುದದಿ ||೧|| ಉರಿವ ತನುವನು ಮುಟ್ಟುಗಲ್ಲಕ್ಕೆ ಮುತ್ತಿಟ್ಟು । ಬರದಿ ತೋಳ್ಗಳ ಬಿಗಿದು ಕಟ್ಟು । ಹರೆಯದಾಸೆಗಳೆಲ್ಲ ಹರಿದು ಹೋಗಲಿ ಬಿಟ್ಟು । ನೆರೆಯನ್ನ ಸುರತವನು ಕೊಟ್ಟು ||೨||

ರಾಗ-ಕೇದಾರಗೌಳ-ಅಷ್ಟತಾಳ :

ಎನುವವಳ ಬರಸಳೆಯು ತಂದ ಕೇಳೆಲೆಗೆ ಇನಿತು ಅವಸರವೇಕೆ ನಿನಗೆ | ಮುನಿವಧುಗಳೊಳಗೆ ಕೊನೆಯವಳು ನೀನು ಹಲ | ದಿನವಿರುತ ಸುಖಪಡುವುದೆನಲು ||೧||

ರಾಗ-ಸಾಂಗತ್ಯ-ರೂಪಕತಾಳ :

ಆಗದಾಗದು ತಳುವಿದ್ದೆನ್ನ ದೆಸೆಯಿಂದ ತಾ | ನಾಗಿ ಸತಿಯರಿಂಗೆಲ್ಲರಿಗೆ | ತಾಗಬಹುದಪಖ್ಯಾತಿ ಬೇಗನೆ ಕಳುಹಿಸು | ಪೋಗಬೇಕೆನುತ ಮುದ್ದಿಸಲು ||೧||

ವಾರ್ಧಿಕ :

ಸುದತಿಯಿಂತೆನಲನಲ ನಿರದೆ ಬಿಗಿದಪ್ಪಿಸುರ |ತದೊಳೊದಗಿ ಹಲವಿಧದಿರಮಿಸಲೊಸರಿದ ದಿವ್ಯ | ಮದನರಸವನು ಅಂಜಲಿಯೊಳಿರಿಸಿ ಪದಕೆರಗುತನಲನನು ಬೀಳ್ಕೊಳ್ಳುತ || ವೊದಗಿ ವನದೆಡೆ ನಡೆದು ಖಗರೂಪವನು ತಳೆದು | ಮುದದಿ ಸಿತಗಿರಿಯೆಡೆಯ ಸಾರಿ ಗಿರಿಕಂದರದಿ| ಹುದುಗಿರ್ಪ ಕನಕಮಯ ಕುಂಡದೊಳಗಾವೀರ್ಯ ವಿರಿಸಿ ತರಳೆಯು ತೆರಳಲು ||೧||

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಇತ್ತ ಶುಕ್ಲಪ್ರಥಮೆಯಾದಿನ | ಮತ್ತಕಾಳಿನಿ ಸ್ವಾಹೆ ಸಿತಗಿರಿ | ಯುತ್ತರದ ಕುಂಡದೊಳಗಿರಿಸಿದ| ಸತ್ವತಾನು ||೧|| ಬೆಳೆದು ಬಿದಿಗೆಯ ದಿನಕೆ ಶಿಶುವಾ | ಯ್ತಿಳೆಯೊಳಗೆ ತದಿಗೆಯೊಳು ತಾ ಬೆಳೆ | ಬೆಳೆದು ಗುಹತಾನಾಗಿ ಚೌತಿಯು| ಕಳೆಯೆ ಬಳಿಕ ||೨|| ಧರೆಯೊಳೈದನೆ ದಿನಕೆ ತಾಪದಿ | ಹರೆಯವನು ಪಡೆಯುತ್ತ ಸೃಷ್ಟಿಯೊ | ಳುರುವ ಜವ್ವನದಿಂದ ಘರ್ಜಿಸಿ| ಮೆರೆಯುತಿರಲು ||೩|| ಆರುಮುಖವೀರಾರು ಭುಜಗಳ | ಘೋರರೂಪದ ತರಳಮೆರೆದೀ | ರಾರು ತೋಳ್ಗಳಬೀಸಲಾತನ ಆರುಭಟೆಗೆ ||೪||

ರಾಗ-ಮಾರವಿ-ಏಕತಾಳ :

ಧರೆನಡುಗಿತು ದೆಸೆ ಬೆಸುಗೆಯು ಬಿರಿಯಿತು | ಶರಧಿಯು ತಾನುಕ್ಕಿ | ಹರಿದುದು ಅಂಬರವದುರಿತು ಶೇಷನು | ಕೊರಳುಳುಕಿದುದೆನಲು ||೧|| ತಾರೆಗಳುದುರಲು ಹಗಲಲಿ ಚಂದ್ರಮ | ತೋರಿದ ನಂಬರದಿ | ವಾರಿಧಿರುಧಿರದಿ ತುಳುಕಿದುದಾಗಕು | ಮಾರನ ಘರ್ಜನೆಗೆ ||೨||

ವಾರ್ಧಿಕ :

ವನದಿಯಾವ್ರತ ಭುವಿಯೊಳೀಪರಿಯ ಉತ್ಪಾತ | ವನುಕಾಣುತಲ್ಲಿರುವ ತಾಪಸಿಗ ರೊಂದಾಗು| ತನುನಯ ದೊಳೀಪರಿಯ ರೌದ್ರತೆಗೆ ಕಾರಣಗಳೇನೆಂದು ಚಿಂತಿಸುತಿರೆ | ವನಚರನು ತಾನೋರ್ವ ಬಂದೊರೆದ ನಾ ಬ್ರಹ್ಮ | ಮುನಿವಧುಗಳಿರದೋರ್ವ ಕಾಡಾಡಿಯನು ಕೂಡಿ | ದನಿತರಿಂದೀ ಪರಿಯೊಳುತ್ಪಾತವೆನಲು ಮುನಿಸಂದೋಹ ವವನ ನೋಡಿ ||೧||

ರಾಗ-ತೋಡಿ-ರೂಪಕತಾಳ :

ಸುಳ್ಳನಾಡದಿರೆಲವೊ ಪರಮಪಾವನೆಯರನು । ಎಲ್ಲಿ ನೋಡಿದೆ ನೀನು ತೊಲಗು । ಕಳ್ಳ ನಿನ್ನಾಟವೆಮ್ಮಲ್ಲಿ ಸಾಗದು ನುಡಿಯೆ । ಹಲ್ಲ ಮುರಿವೆವು ಜೋಕೆ ಎನಲು ॥೧॥

ರಾಗ-ಸಾರಂಗ-ಅಷ್ಟತಾಳ :

ಕೇಳಿರಿ ಮುನಿಗಳೆಲ್ಲ । ನೋಡಿದುದನಾ । ಪೇಳುವೆ ಸುಳ್ಳಿದಲ್ಲ ॥ಪಲ್ಲ॥ ಬಾಲಕಿಯರು ಬಂದು ವನದೊಳೋರ್ವನ ಕೂಡಿ । ಬಾಳನಗುತಲಿದ್ದರು । ಮುನಿಮಡದಿಯರು ॥೧॥ ಬಂದವಳೊಬ್ಬಳಲ್ಲ । ಐದು ಮತ್ತೊಂದು । ಮಂದಿಗಳಿದ್ದರಲ್ಲ । ಚಂದದೊಳಾತನ ಕೂಡಿ ಭೋಗಿಸಿ ಹೀಗೆ । ಬಂದರು ನೋಡಾ ಸ್ವಾಮಿ । ಕೆಟ್ಟಿತು ಭೂಮಿ ॥೨॥

ರಾಗ-ತೋಡಿ-ರೂಪಕತಾಳ :

ವನಚರನಿಂತೆನೆ ಕೇಳಿ ಮುನಿಗಳು ಬ್ರಹ್ಮ। ಮುನಿಗಳಿಗಿದ ನರುಹುವೆವೆನುತ । ಮುನಿಗಳಾಶ್ರಮಕ್ಕೈದು ತೆರಗಿ ವಂದಿಸೆ ಬೊಂಮ। ಮುನಿಗಳು ಹರುಷತ್ತಲವರ ॥೧॥ ಬಂದುದೇನೆಂದು ಕೇಳಲ್ಕಾಗ ವನಚರ । ನೆಂದುದನ್ನಿವರು ಪೇಳಿದರು ॥ ಎಂದ ಮಾತನು ಕೇಳು ತಂದಾಗ ಬ್ರಹ್ಮರ್ಷಿ । ವೃಂದ ಮಡದಿಯರನ್ನು ಕರೆಸಿ ॥೨॥ ನಿಂದಿಸುತ್ತ ವರನಾಶ್ರಮದಿಂದ ಹೊರಡಿಸೆ । ನೊಂದ ವಿಶ್ವಾಮಿತ್ರನಾಗ । ಇಂದು ನಿರ್ದೋಷಿಗಳು ಮಡದಿಯರು ಎಂದೆನುತ । ಹಿಂದೆನಡೆದುದ ಪೇಳ್ದ ಮುನಿಪ ॥೩॥

ವಾರ್ಧಿಕ :

ಅನಲನಂ ಕಂಡು ಬಯಸಿದ ದಕ್ಷನಾ ಕುವರಿ । ಅನಲನಿಂತಿರಸ್ಕರಿತೆ ತಾನಾಗುತಾದಿನಂ । ಮುನಿವಧುಗಳಂ ಬಯಸಿ ಪೊಂದಲರಿಯದೆ ಸಾವೆನೆಂವೆನುತ ಪೋಪನಲನ ॥ ಅನುಸರಿಸಿ ಪೋಗುತವನಂತರಿಯಮನ್ನರಿತು । ಮುನಿವಧುಗಳಾ ವೇಷದೊಳಗಗ್ನಿಯಂ ಕೂಡಿ । ವನದೆಡೆಯೊಳಿರ್ಪುದನು ಕಣ್ಣಾರೆ ನೋಡಿದೆನು ಪಾವನೆಯರೀಸತಿಯರು ॥೧॥

ರಾಗ-ತೋಡಿ-ರೂಪಕತಾಳ :

ಮುನಿಪ ವಿಶ್ವಾಮಿತ್ರ ನಿಂತೆನಲು ಮುನಿವರರು । ಸನುಮತವಿದಲ್ಲ ವಿಂದೀಗ । ಎನುತಲಾಲೋಕಾಪವಾದ ಭೀತಿಗೆ ಬೆದರಿ ವಿನುತೆಯರ ಪರಿತ್ಯಜಿಸಲವರು ॥೧॥ ಅಯ್ಯನಿರ್ದೋಷಿಗಳು ನಾವರಿಯೆ ವಿದನೆನುತ। ಕಯ್ಯ ಮುಗಿಯುತ ಬೇಡಲಂದು । ಅಯ್ಯಗಳು ಮನ್ನಿಸದೆ ತೊಲಗಿರೆಂದನೆ ವಿಧಿಯ । ಬಿಯ್ಯುಳುತಲವರು ಪೊರಮಡಲು

ವಾರ್ಧಿಕ :

ಇತ್ತ ಭುವಿಯೊಳಗಾದ ಉತ್ಪಾತಗಳಹರನ । ಒತ್ತಿನೊಳಗಿರ್ಪ ಶಿವೆ ಕಂಡು ಬೆದರುತಲರೆಯ। ಪೃಥ್ವಿಯೊಳಗೀಪರಿಯ ಉತ್ಪಾತವೇಕೆನಲು ಪರಮಶಿವ ಮುಗುಳು ನಗುತ ।। ಬಿತ್ತರಿಸಿದನು ಕೇಳೆ ಸಿತಗಿರಿಯು ಇಂದೆನ್ನ । ಸತ್ವಯುತರೇತಸ್ಸುಗಳ ರಾಶಿಯದರೊಳಗೆ । ಮತ್ತೆ ಅದುಭುತಅನಲವೀರ್ಯವದು ಮೇಳವಿಸೆ ಜನಿಸಿದವನೆನ್ನ ಮಗನು ।।೧।।

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಘನಬಲಾನ್ವಿತ ನವನ ಸತ್ವಕೆ । ವನಿಯು ತಾಳದೆ ನಡುಗಿತೀ ಪರಿ । ಎನಲು ಕಂದನ ನೋಡಬೇಕೆಂ । ದೆನಲು ಗಿರಿಜೆ ।।೧।।

ವಾರ್ಧಿಕ :

ಸರಿಯೆನುತ ಪರಶಿವನು ಮನದೊಳಗೆ ಚಿಂತಿಸುತ ಪರಿಕಿಸುವೆ ನೀ ಮಗನ ಸತ್ವಗಳನೆಂದೆನುತ ಗಿರಿಯನಿಳಿಯುತ ನಂದಿಯನು ಬಿಟ್ಟು ಹಣೆ ಗಣ್ಣ ನುಳಿದು ನಿಷಧನ ವೇಷವ ।। ಧರಿಸಿ ಗಿರಿಜನಿತೆಯಳ ಕೂಡೆ ಗಣಗಡಣಗಳು । ವೆರಸಿಸಿತ ಗಿರಿಯತ್ತ ಸಾಗುತಲ್ಲಿಹ ವನದಿ । ಭರದಿ ಬೇಟೆಯನಾಡಿದನು ಪರಮಶಿವನಾಗ ಗಣಗಳೊಡನೊಂದಾಗುತ ।।೧।।

ರಾಗ-ಸೌರಾಷ್ಟ್ರ-ಮಟ್ಟೆತಾಳ :

ಬಂದನಾಗ ಬೇಟೆಯಾಡುತ । ಗಣಗಳೊಡನೆ ಕೂಡಿತಾನು । ಪರಮಶಿವನು ಬೇಟೆಯಾಡುತ ।।ಪ।। ಪರಮಶಿವನು ಬರುತ ಕಾಣುವ ಅಡವಿಯೊಳಗೆ । ಭರಿತರೋಷದಿಂದ ಹಾಯುವ । ಶರಭ ಸಿಂಗ ಚಮರಿ ಮಹಿಷ । ಕರಿಯಘಟೆಗಳನ್ನು ತರಿದು । ಹರಿಣವೊಂದರಿರವ ಕಂಡು । ಪರಮಶಿವೆಗೆ ತೋರೆ ಶಿವನು ।।೧।। ಹರಿಣದಂದವನು ಕಾಣುತ । ಪರಮಶಿವೆಯು ಹರುಷದಿಂದ ಹರನ ನೋಡುತ । ಹರಿಣವನ್ನು ಹರಣ ಸಹಿತ । ಸೆರೆಯಪಿಡಿಯಬೇಕೆನುತ್ತ । ಲೆರೆಯನನ್ನು ಕೇಳಲಾಗ । ಪರಮಶಿವನು ಧನುವ ನೆಗಹಿ ।।೨।। ಹರಿಣಕೆಂದು ಗುರಿಯನೋಡುತ । ಹರನುತಾನು । ಶರವ ಪೂಡಲಾಡುತಾಡುತ । ಹರಿಣ ಮರೆಯ ಸೇರೆ ಹರನು । ಭರದಿ ಬೆನ್ನ ಹತ್ತೆ ಬಳಿಯ । ಅರೆಯೊಳಿರ್ದ ಕಂದ ಕಂಡು ಕೆರಳುತೆಂದ ನೆಲವೊನಿಲ್ಲು ।।೩।।

ರಾಗ-ಸೌರಾಷ್ಟ್ರ- ತ್ರಿವುಡೆತಾಳ :

ನಿಲ್ಲು ಎಲವೆಲವೋ ಕಿರಾತನೆ । ಕೊಲ್ಲದಿರು ಬಡಹುಲ್ಲೆಯೆಮ್ಮಯ । ಕಿಲ್ಲೆಯಿದು ಮುಂದಡಿಯನಿಟ್ಟರೆ । ಕೊಲುವೆನೆನಲು ।।೧।। ಮಡದಿ ಗೋಸುಗ ಹರಿಣವನು ಬೆಂ।ಬಿಡಿದು ಬಂದೆನು ತರಳಯೆನ್ನನು । ತಡೆದೆಯಾದರೆ ಹರಣ ಗೊಂಬೆನು । ನಡೆಯೆನಲ್ಕೆ ।।೨।। ಕನಲಿ ಘರ್ಜಿಸುತಾಗ ತರಳನು । ಮುಸಿದೆ ನಾದಡೆ ನೀಲಕಂಠನ । ಗಣುಪನೆ ಘಡತೊಲಗೆನಲು

ನಂ । ಜುಣಿಗ ತಾನು ॥೩॥ಕೆರಳಿ ಬಾಣಾಸನಕೆ ವಿಧವಿಧ । ಶರಗಳನು ಜೋಡಿಸುತ ಲೆಸೆಯಲು। ತರಳನದಕರತಳದಿ ತಡೆದಿರೆ । ಹರನುನಗುತ ॥೪॥ ಆರುಮುಖ ವೀರಾರು ಭುಜವೆಂ। ಬಾರು ಭಟೆಯಲಿ ಮುಂದೆ ಬರುತಿಹ । ವೀರನನು ತಡೆಯುತ್ತ ತನ್ನನು । ತೋರು ತೆಂದ ॥೩॥

ರಾಗ-ತೋಡಿ-ರೂಪಕತಾಳ :

ವಿನುತನಿನ್ನಯ ಸತ್ವವನು ಪರಿಕಿಸಲೆನುತ । ಮನದಿ ಯೋಚಿಸಿ ಬಂದೆ ಶಿವನು ।ಘನನೆನೀನೆನ್ನ ಮಗ ನೆನುತ ಜನುಮದ ವಿವರ ।ವನಿತನಾತಗೆ ಪೇಳಲಾಗ ॥೧॥ ಘನ ಹರುಷ ದಿಂದಯ್ಯಗೆರಗಿ ವಂದಿಸಲು ಗಿರಿ। ಜನಿತೆ ಕಂದನನಪ್ಪಿ ಹರಸೆ ।ಅನಿತರೊಳು ಮುನಿಪ ವಿಶ್ವಾಮಿತ್ರ ನೈತಂದು। ವಿನಯ ದಿಂದಾರುಮುಖಗೆರಗಿ ॥೩॥

ರಾಗ-ಮಧುಮಾಧವಿ -ತ್ರಿವುಡೆತಾಳ :

ಹರಗೆರಗಿ ವಂದಿಸುತ ಜನಿಸಿದ।ತರಳನಿಗೆ ಜಾತಾದಿ ಕರ್ಮವ । ನಿರದೆ ವಿರಚಿಸ ಬೇಕೆನುತ ಹರ । ಗಿರಿಜೆಯರಿಗರುಹಿ ಬಳಿಕ ॥೧॥

ವಾರ್ಧಿಕ :

ಮುನಿಪ ವಿಶ್ವಾಮಿತ್ರ ಕಂದನನು ಪೂಜಿಸುತ । ಲನುನಯದಿ ಜಾತಕರ್ಮಗಳ ವಿಧಿ ವಿಹಿತವನೆ। ಅನುಕರಿಸಿ ನಾಮಕರಣವಮಾಡಿ ಶಿವ ಪುತ್ರನಿರೆ ಕುಮಾರನು ಯೆನ್ನುತ ।ವನಿತೆ ವೀರ್ಯವ ನಾರು ಬಾರಿ ಯಿರಿಸಿದುದಾಗಿ । ಷಣುಮುಖನು ಬಲವಂತನಾಗಿ ಗುಹ ಗರುಡ ತಾ । ನೆನಿಪ ಖಗ ವೇಷದಲಿ ವೀರ್ಯ ಶೇಖರವಾಯ್ತು ಸ್ಕಂದ ನಿವನೆಂದೆನ್ನಲು ॥೧॥

ರಾಗ-ತೋಡಿ-ರೂಪಕತಾಳ :

ಹರನೊಲಿದು ಪಾಶು । ಪತವನ್ನು ಕರುಣಿಸಲಾಗ । ಹರಗಣಗಳೆಲ್ಲ ಬಂದೆರಗಿ । ಯಿರದೆ ಷಣ್ಮುಖ ಪಾರಿಷದ ರಾಗೆ ಕಂದ ಬಲು । ಮೆರದು ಘರ್ಜಿಸಲಿತ್ತ ಸುರಪ ॥೧॥

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಇತ್ತ ಷಣ್ಮುಖ ನಿಂತಿರಲು ತಾ । ನತ್ತ ಸುರಪತಿ ಸುರಬಲಗಳೊಡ । ನಿತ್ತ ಓಲಗದೊಳಗೆ ಬಲುಬೆದರುತ್ತಲೆಂದ ॥೧॥ ಮೇದಿನಿಯ ನಡುಗಿಸುತ ಧರ್ಮದ । ವೇದಿಕೆಯು ತಾನೆನಿಪ ಪ್ರಕೃತಿಯ । ನಾದಿಯಾದ ವ್ಯವಸ್ಥೆಗಳನುವಿ । ನೋದದಿಂದ ॥೨॥ ಕೆಡಿಸುತಿಹ ತಾನೋರ್ವ ಸಿತಗಿರಿ । ಗೊಡೆಯ ತಾನೆಂದೆನುತ ಮೆರೆಯುತ । ಸಿಡಿವ ಕಿಡಿಯಂತುರಿವತರಳನ । ಬಿಡದೆ ನೀವು ॥೩॥ ತೆರಳಿ ಪಡೆಸಹಿತೀಗ ಸಿತಗಿರಿ । ವರವನೇರುತ ಧುರದೊಳಾತನ । ಹರಣಗೊಂಬುದೆನಲ್ಕೆ ಸುರಪನು । ಸುರರು ಬೆದರಿ ॥೪॥

ರಾಗ-ಮಧುಮಾಧವಿ -ತ್ರಿವುಡೆತಾಳ :

ಧುರಪರಾಕ್ರಮಿಯವಗೆ ಗಂಗಾಧರನು ಪಾಶುಪತಾಸ್ತ್ರವನು ಬಲು । ಹರಸಿಯಿತ್ತಿಹ ನವನ ಗೆಲುವೊಡೆ । ಅರಿದೆನಲಾ ಸುರಪತಿಯು ॥೧॥

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಸುರರು ಬೆದರಲ್ಕಾಗ ಲಾಸುರ । ರೆರೆಯ ಚಿಂತಿಸಿ ಮಾತೃದೇವತೆ । ಯರನು ಕರೆಸುತ ವಿವರಗಳ ತಾ । ನೊರೆದನಾಗ ॥೧॥ ಅತ್ತಸಿತಗಿರಿಯೊಳಗೆ ಕಂದನು । ಮತ್ತ ತಾನಾಗುತ್ತ ಸ್ವರ್ಗದ । ಸೊತ್ತ ಬಯಸುತ ಬರದತೆರನೀ । ವತ್ತ ತೆರಳಿ ॥೨॥ ಏರಿಗಿರಿಯನು ಹೀರಿ ಸತ್ವವ । ನಾರು ಮುಖನನು ಕೊಲುವುದೆನಲವ।ರಾರು ಮಂದಿಯು ಷಣ್ಮುಖನ ಬಳಿ । ಸಾರಿ ಬಂದು ॥೩॥

ವಾರ್ಧಿಕ :

ಬಾಲಕನ ಸತ್ವವನು ಹೀರಿ ಕೊಲ್ಲುತ ಮಾತ । ಪಾಲಿಸುವೆ ವೆಂದೆನುತ ಬಂದ ತಾಯ್ದೇವಿಯರು। ಬಾಲಕನ ನೋಡನೋಡುತ್ತ ಮೊಲೆಗಳು ಬಿಗಿದು ಪಾಲೊಸರೆ ಮರೆತೆಲ್ಲವ ॥ ಬಾಲಕನ ಆರುಮುಖ ಕೊರುವ ರೊಂದೊಂದು ಮೊಲೆ । ಹಾಲುಣಿಸುತಾತನನು ಮಗುವೆಂದು ಮುದ್ದಿಸುತ। ಬಾಲಕನ ಕೂಡಿರಲು ಅದುಭುತನಲನು ಬಂದು ಮಗನನಾಡಿಸುತಲಿರಲು ॥೧॥

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಇತ್ತ ಸುರಪತಿ ಕೆರಳಿ ಪ್ರಲಯತ್ರಿ ನೇತ್ರ ನಂತಾರ್ಭಟಿಸುತಾ ಸುರ।ಮೊತ್ತವನು ಕರೆದೆಂದ ದೇವಿಯ । ರತ್ತ ತೆರಳಿ ॥೧॥ ಅರಿಯನಾಶ್ರಯಿಸಿದರು ಕಂದನ । ಮುರಿಯ ಬೇಕೆಂದೆನುತ ವಜ್ರವ। ಹಿರಿದು ಐರಾವತವನೇರುತ।ನೆರಹಿ ಬಲವ॥೨॥ ನಿರುತಿ ಶಿಖಿವರುಣಾದಿಗಳು ಖತಿ ಯೇರಿ ಘರ್ಜಿಸಿ ಶ್ವೇತ ಗಿರಿಯೆಡೆ । ಸಾರೆ ನಡು ಪಥದೊಳಗೆ ತಡೆದನು । ತರಳನವರ ॥೩॥

ರಾಗ-ಭೈರವಿ-ಏಕತಾಳ :

ತಡೆಯುವ ತರಳನ ಕಂಡು ಸುರರೊಡೆಯನು ತಾ ಮುಂಕೊಂಡು ।ನುಡಿದನು ಎಲವೊ ನಿನ್ನ। ಮದ । ಬಿಡಿಸುವೆ ನೋಡೆಲೊ ತರಳ ॥೧॥ ಸುರಪನುಯಿಂತೆನೆ ಕೇಳಿ । ಬ್ಯಾ । ದೆರೆಯುತ ಕಿಡಿಗಳ ನುಗುಳಿ । ಸುರಬಲಗಳ ಸುಡುತಿರಲು । ಶಿಖಿ । ವರುಣರು ಶರಣೆನುತಿರಲು ॥೨॥

ರಾಗ-ಮಾರವಿ-ಮಟ್ಟೆತಾಳ :

ತರಳನನ್ನು ಶರಣು ಹೊಕ್ಕ ಬಲವ ಕಾಣುತಾ । ಸುರಪ ಕೋಪದಿಂದ ಕೆರಳಿ ವಜ್ರ ನೆಗಹುತ ॥೧॥ ಬಲನು ವಜ್ರದಿಂದ ತರಳ ನುರಕೆ ಬಡಿಯಲು ।ಬಲದಭಾಗ ಸೀಳಿ ಡೊಗರೊಳೋರ್ವ ಜನಿಸಲು ॥೨॥ ವಜ್ರವಿಶನದಿಂದ ಜನಿಸಿದಾ ವಿಶಾಖನು । ವಜ್ರಿಯನ್ನು ಕಂಡು ತಿಂಬೆನೆನುತ ಬಂದನು ॥೩॥

ರಾಗ-ಮಾರವಿ-ಏಕತಾಳ :

ಘೋರಾಕಾರದೊಳಾಗ ವಿಶಾಖನು । ಆರುಭಟಿಸುತಾಗ । ವೀರಾವೇಶದಿ ತಿಂಬೆನೆನಲು ಜಂ। ಭಾರಿಯ ಓಡುತಲಿ ॥೧॥

ವಾರ್ಧಿಕ :

ಒಡೆದಾರು ಮುಖನ ಬಲ ಹೊಡೆಯಿಂದ ಸಿಡಿಲಂತೆ । ಝಡಿದು ಬೊಬ್ಬಿಡುತ ಬಾಯ್ದೆರೆದು ನುಂಗುವೆನೆನುತ । ಕಿಡಿಯಿಡುತಲಡಿ ಗಡಿಗೆ ಬೆಂಬಿಡದೆ ಬಪ್ಪ ವೈಶಾಖನನು ಕಂಡು ಬೆದರಿ। ಬಿಡದೋಡೆ ಮೂಲೋಕಮಂ ಮತ್ತೆ ಬೆಂಬಿಡದೆ । ನಡೆತಪ್ಪ ಬೀಭತ್ಸ ದಾಕಾರಮಂ ಕಂಡು। ನಡನಡುಗುತಿರೆ ಬರುತಲಾತರಳ ನಡಿಗೆರಗಿ ಶರಣಾದೆ ರಕ್ಷಿಸೆನುತ ॥೧॥

ರಾಗ-ತೋಡಿ-ರೂಪಕತಾಳ :

ಸುರಪನಾತರಳನಿಗೆ ನಮಿಸಿ ವಿನಯದೊಳೆಂದ। ಶರಣಾದೆ ರಕ್ಷಿಸುತಲೆಮ್ಮ॥ ಸುರಪಾಲಪದವಿಯನು ಸ್ವೀಕರಿಸಬೇಕೆನುತೆ । ಲೆರಗಿ ವಂದಿಸಲಾಗ ತರಳ ॥ ಸುರಪಾಲಪದವಿಯನು । ಸ್ವೀಕರಿಸಬೇಕೆನುವ ।ಸುರಪಾಲನನು ನೋಡಿ ತರಳ । ಸುರಪಾಲ ನಿಂಗಿಪ್ಪ ಕರ್ತವ್ಯವೇನೆನೆಲು । ಸುರಪಾಲನೆಂದ ಕೇಳೆನುತ ॥೨॥

ವಾರ್ಧಿಕ :

ಧಾರುಣಿಯೊಳನುಗಾಲ ಧರ್ಮಗಳು ತಾವುನೆಲೆ ।ಯೂರಿ ನಿಲುವೊಲು ಜಗದಶಿಕ್ಷೆಗಳ ರಕ್ಷೆಗಳ। ಭಾರಬಲ ಸಂತಾನ ತೇಜವಳಿಯ್ದುದ ತೆರದಿ ಕಾಪಾಡಿಕೊಂಡು ಬರುತ । ಸೂರಿಯನು ಚಂದ್ರಮನು ಅಗ್ನಿ ನೈರುತ್ಯ ಯಮ । ಭೂರಿ ಬೆಳಕಾಗಿ ಮಳೆಯಾಗಿ ಬೆಳೆಯಾಗಿ ಬಲು । ಧಾರುಣಿಯುತಾನಾಗಿ ಜಗವ ರಕ್ಷಿಸಬೇಕು ಯಿಂದ್ರ ನೆನಲಾಗ ತರಳ ॥೧॥

ರಾಗ-ಮಧ್ಯಮಾವತಿ -ತ್ರಿವುಡೆತಾಳ :

ಸುರಪ ನೀ ಪರಿಯೊರೆಯೆ ತರಳನು । ಸುರಪಪದವಿಯು ಬೇಡೆನುತ ಸುರ । ರೆರೆಯ ನಿನ್ನಯ ಸೇವೆ ಮಾಳ್ಪುದೆ ।ಪರಮ ಪದವಿಯು ಎನಗೆನುತ। ಲೊರೆಯಲಾಗ॥೧॥

ವಾರ್ಧಿಕ :

ತರಳನಿಂತೆನೆ ಕೇಳ್ದು ಸುರಪತಿಯು ವಿಧಿತನ್ನೊ । ಲೊರೆದ ಮಾತುಗಳನ್ನು ನೆನೆಯುತ್ತ ಕರಮುಗಿದು ।ಸುರಸೇನೆ ಗಧಿಪತಿಯು ನೀನಾಗಬೇಕು ಬಳಿಕಾ ದೇವ ಸೇನೆಯಳನು ॥ ವರಿಸುತ್ತ ಭೂಸುರರ ಗೋವುಗಳ ರಕ್ಷಣೆಗೆ । ಪರಮವಿಕ್ರಮಿ ಎನಗೆ ಸಹಕರಿಸು ಅಭಿಮತವು । ಶರಜ ಪೀಠನದೆನಲು ತರಳ ಸಂತಸದಿಂದ ಸಮ್ಮತಿಸಲಾಗ ಸುರಪ ॥೧॥

ರಾಗ-ಕೇದಾರಗೌಳ -ಅಷ್ಟತಾಳ :

ಸುರಪತಿಯು ಸಂಭ್ರಮದ ಮೇಳದಲಿ ತರಳನನು । ಕರೆ ತಂದು ಸುರಪುರದೊಳು ।ಗುರುಗಳಂ ಕರೆಸಿ ವಿಧಿ ವಿಹಿತ ಮನೆ ಅವಭೃತವ । ವಿರಚಿಸುತ ಬಳಿಕ । ಲವನ ॥೧॥ ಸುರುಚಿರದ ಪೀಠದೊಳಗಿರಿಸಿ ಸುರ ಸೈನ್ಯಕ್ಕೆ । ಪರಮ ಸೇನಾನಿಯೆನುತ ।ವರಮಂತ್ರ ಜಲದಿ ಪಟ್ಟಾಭಿಷೇಕವ ರಚಿಸಿ । ಹರಸಿ ಸೇಸೆಯ ತಳಿಯುತ ॥೨॥

ದೇವಾಧಿ ದೇವತೆಗಳೆಲ್ಲ ಕರಮುಗಿದಿರಲು । ದೇವಸೇನಾಧೀಶಗೆ ದೇವ ಸೇನೆಯನಿತ್ತು ಪರಿಣಯವ ವಿರಚಿಸಲು । ದೇವಾದಿಗಳು ಹರಸಲು ॥೩॥

ರಾಗ-ತೋಡಿ -ರೂಪಕತಾಳ :

ಅನಿತರೊಳು ಪರಿತ್ಯಜಿತ ಮುನಿಸತಿಯರು ಬಂದು । ಘನನೆ ಮೋಕ್ಷವ ಕರುಣಿಸೆನಲು । ವಿನಯದಿಂದವರಿಂಗೆ ಮೋಕ್ಷವನು ಕರುಣಿಸಲು । ವಿನುತೆಯರು ತೆರಳೆ ಬಳಿಕಿತ್ತ॥೧॥

ವಾರ್ಧಿಕ :

ಪರಿಣಯಕೆ ಪಟ್ಟಾಭಿಷೇಕಕ್ಕೆ ಬಂದವರು ।ತೆರಳೆಮಾರುತ ಸ್ಕಂದ ವೆಂಬ ವಿಳನೆಯ ಬಲ । ಶರಧಿ ಗಿಂದಿದು ತನಕ ಅಧಿಕಾರಿಯಾನಿದ್ದೆ ನೀದಿನದ ಬಳಿಕ ನೀನು ॥ ಪರಮಾಧಿಕಾರಿಯೆನು ತೊರೆವ ಸುರಪಗೆ ನಮಿಸಿ । ತೆರಳುತ್ತಲಾ ಸರ್ವ ಸೇನಾನಿ ಸಂಭ್ರಮದಿ ।ಸುರಸೇನೆಯಳ ಕೂಡಿ ಹರುಷದೊಳಗಿರಲಾಗ ಲತ್ತ ಶೋಣಿತಪುರದೊಳು ॥೧॥

ರಾಗ-ಸೌರಾಷ್ಟ್ರ-ತ್ರಿವುಡೆತಾಳ :

ಇತ್ತರಿವರಿಂತಿರಲುತಾ । ನತ್ತ ಶೋಣಿತ ಪುರದೊಳಗೆ ಮದ ।ಮತ್ತ ಮಹಿಷಾಸುರನು ತಾಮೆರೆ। ವುತ್ತಲಿರುತ ॥೧॥ ಭೃತ್ಯರನು ಕರೆದೆಂದ ಜಗದೊಳು ।ಕೃತ್ತಿವಾಸನ ಭಜಿಸಿ ಬಲವಡೆ ।ದುತ್ತಮನು ಸಾಹಸದಿ ಗೆಲಿದೆನು । ಮರ್ತ್ಯರನ್ನು ॥೨॥ಸುರರು ಪೂರ್ವ ವಿರೋಧಿಗಳು ಸುರ । ಪುರಕೆಧಾಳಿಯನಿಡುವೆನೆನುತಲಿ । ಬರುವ ಅಸುರನ ಸ್ಮರದಬಾಗಿಲ ।ಚರನು ತಡೆದು ॥೩॥ಪಿಡಿದ ಖಡುಗವ ಝಳಪಿಸಲು ಖಳ। ಸಿಡುಕಿತದುಕಲು ಚರನು ಬಂದಾ ।ಒಡೆಯ ಗರುಹಲು ಕೆರಳುತಾಸುರ ರೊಡೆಯ ತಾನು ॥೪॥

ರಾಗ-ಮಾರವಿ-ಏಕತಾಳ :

ಬಲಗಳ ನೆರಹುತ ಲಸುರನ ತಡೆಯಲು ।ಜಲಧಿಪತಾನಾಗ ।ಬಲುಹಿನೊಳಾಯುಧ ಝಳಪಿಸಿ ಮುಂಬರಿ ।ಯಲು ಮಹಿಷನು ತಾನು ॥೧॥ ವರುಣನ ಕಾಣುತ ಕುನ್ನಿಯೆ ನಡೆನಡೆ ।ಹರಪುರದೆಡೆಗೆನುತ ।ಉರಕೊಡೆಯಲು ವರುಣನು ನೀರಾಗಲು । ಮರುತನು ಮುಂಬರಿದು ॥೨॥ ಬಿಡುಬಿಡು ವರುಣನ ಗೆಲಿದಿಹ ಹಮ್ಮನು । ಬಿಡಿಸುವೆನಿಲ್ಲೆನುತ । ನುಡಿದೆರಗಲು ಖಳ ಪಿಡಿದವನನು ಎಸೆ । ದೊಡೆ ಶಿಖಿತಾನಾಗ ॥೩॥

ರಾಗ-ಶಂಕರಾಭರಣ-ಮಟ್ಟೆತಾಳ :

ಕಿಡಿಯಗೆದರುತಾಗಶಿಖಿಯು । ಘಡಘಡಿಲವೊ ಕುನ್ನಿ ನಿನ್ನ । ಬಿಡೆನು ಎನುತ ಮುಂದುವರಿದು। ಸುಡುವೆನೆನುತಲಿ ॥ ಅಡಿಯ ನಿಡುತ ಬರಲು ಮುಂದೆ ।ದಡಿಗದನುಜ ಪಿಡಿದು ಗದೆಯೊ । ಳಿಡಲು ಶಿಖಿಯು ಸೋತು ಧರೆಗೆ । ಕೆಡೆದನಾ ಕ್ಷಣ ॥೧॥

ರಾಗ-ಭೈರವಿ-ಏಕತಾಳ :

ಧರೆಗುರುಳದ ಬಲಗಳಿನು ।ಸುರವರ ಕಾಣುತಲದ ತಾನು ॥ ಕರದೊಳು ವಜ್ರವನೆಗಹಿ । ಬರುತಿರಲೊರೆದನು ಹೆಣದಿನಿಹಿ ॥೧॥ಕರೆದು ಕೊಕಾಪಾಡುವರ ।ಸುರ ।ಪರಿಸಗೇತಕೆ ಬವರ ।ಪರಿನೋಡೆನ್ನುತಗದೆಯೊ ।ಳಿಡ । ಲಿರದೋಡಿದ ಸುರರೊಡೆಯ ॥೨॥

ರಾಗ-ಸೌರಾಷ್ಟ್ರ -ತ್ರಿವುಡೆತಾಳ :

ಸುರಪನೋಡಲು ಕಂಡುದಾನವ । ಹರುಷದಿಂದಾರ್ಭಟಿಸೆ ಸಿಡಿಲಿವ । ಮರಿಯು ತಾನೆಂಬಂತೆ ಘರ್ಜಿಸು । ತಾರುಮುಖನು ॥೧॥

ರಾಗ-ಮಾರವಿ-ಏಕತಾಳ :

ಭರದೊಳು ಬಂದಾ ದುರುಳನ ತಡೆಯುತ । ಹರಸುತ ತಾನೆಲ್ಲೋ ।ಹರಿದರೆ ಮುಂದಕೆ ಕಳುಹುವೆ ನೀಗಲು ।ಹರನೂರೆಡೆಗೆನಲು॥೧॥

ರಾಗ-ಮಾರವಿ-ಮಟ್ಟೆತಾಳ :

ಭರದಿ ಮುಂದೆ ಬರುವ ತರಳನನ್ನು ಕಾಣುತ।ದುರುಳನಾಗಕರದ ಚಾಪವನ್ನು ನೆಗಹುತ ॥೧॥ ಮುಂದು ವರಿದ ಖಳನ ಕುವರನಾಗ ಕಾಣುತ ।ಇಂದುಧರನಾಯಿತ್ತ ಪಾಶು ಪತವ ಪಿಡಿಯುತ ॥೨॥

ರಾಗ-ಭೈರವಿ-ಏಕತಾಳ :

ತರತರಮಂತ್ರಾಸ್ತ್ರಗಳ ।ಬಿಡು ।ವಿರದೆಸೆಯುತಲಿರೆ ದುರುಳ ॥ಪರಿಹರಿಸುತಲಾ ಸರಳ ।ಮರು ।ಶರಗಳನೆಸುತೀ ತರಳ ॥೧॥

ರಾಗ-ಶಂಕರಾಭರಣ -ಮಟ್ಟೆತಾಳ :

ಬಿಡುವಶರದಹತಿಗೆ ಖಳನು । ಪಿಡಿದ ಧನುವು ಮುರಿಯಲಾಗ । ಝುಡಿದು ಮುಷ್ಟಿಯಿಂದ ಉರಕೆ । ಬಡಿಯಲಾಖಳ ॥ ಸಿಡಿಲಿನಂತೆ ತರಳನಾಗ । ದಡಿಗನುರಕೆ ಬಡಿಯಲಿರದೆ । ದಡಿಗ ರುಧಿರಕಾರಿ ಸತ್ತು ।ಹುಡಿಯೊಳೊರಗಲು ॥೧॥

ರಾಗ-ಸೌರಾಷ್ಟ್ರ- ತ್ರಿವುಡೆತಾಳ :

ದುರುಳರನು ಸಂಹರಿಸಿ ಸುರರನು ।ಪೊರೆದ ಸ್ಕಂದ ಗೆ ಜಯವೆನುತ ಸುರ ।ರೆರೆಯ ಆರತಿಯೆತ್ತಿ ತರಳಗೆ । ಶರಣುವೆನಲು ||೧||

ವಾರ್ಧಿಕ :

ಶ್ರೀಧರನ ಮಗನೆನಿಸಿ ಶ್ರೀಧವನದಯೆಯಿಂದ ।ಪಾದಳದ ವೆಂಕಟ್ರಮಣ ಅಂಣ ನೊರೆಯೆಲ। ಕ್ಷ್ಮೀಧವನ ಪೆಸರಕಲೆಯರಸಿಯಳ ಕಿಂಕರನುಯೀ ಯಕ್ಷಗಾನ ಕೃತಿಯ । ಕೋದಿಹೆನು ಶಿವಸುತನ ಮಹಿಮೆಗಳ ಮಾಲೆಯಿದ । ನೋದಿದರ ನುಪ್ಪಿನಂಗಡಿಯ ಶಿವ ಮಹಾಕಾಳಿ । ಯಾದರದೊಳಾರೋಗ್ಯ ಮೈಶ್ವರ್ಯ ಗಳನಿತ್ತು ರಕ್ಷಿಸಲಿ ಹರಕೆನಿಂದೆ ||೧||

ಮಂಗಳ ಪದ :

ಮಂಗಲ ಮಹಿಮಾನ್ವಿತಹರಿಗೆ ।ಮಂಗಲಶಿವನಿಗೆ ಶಂಕರಿಗೆ ।ಮಂಗಲ ಶಿವನ ಕುಮಾರಗೆ ಸ್ಕಂದಗೆ । ಮಂಗಲಷಣ್ಮುಖ ದೇವನಿಗೆ । ಮಂಗಲಂ । ಜಯ । ಮಂಗಲಂ ||

(ಯಕ್ಷಗಾನ ಅಮರಸೇನಾಧಿಪತ್ಯವು ಮುಗಿದುದು)

✦ ✤ ✦

ಪಾತ್ರಗಳು

ದೇವೇಂದ್ರ	ಗರುಡ
ಸುರಬಲಗಳು	ವನಚರ
ಕೇಶಿ ದಾನವ	ಬಾಣಸಿಗ
ರಾಕ್ಷಸಭೃತ್ಯ	ಸುಶೀಲೆ
ನಾರದ	ಸೋಮ
ದೈತ್ಯ ಸೇನೆ	ಷಣ್ಮುಖ
ದೇವ ಸೇನೆ	ತಾಪಸಿಗಳು
ಬ್ರಹ್ಮ	ವನನಿವಾಸಿ
ಈಶ್ವರ	ವಿಶ್ವಾಮಿತ್ರ
ಪಾರ್ವತಿ	ಈಶ್ವರ ಗಣಗಳು
ಬ್ರಹ್ಮರ್ಷಿಗಳು	ಕಿರಾತ
ಅದ್ಭುತಾಗ್ನಿ	ಮಾತೃದೇವತೆಯರು
ಸ್ವಾಹಾದೇವಿ	ವಿಶಾಖ
ಬ್ರಹ್ಮರ್ಷಿಯರ ಸತಿಯರು	ಮಹಿಷಾಸುರ

ಕೃತಿಕಾರರ ಕುರಿತು

ಹೆಚ್. ನಾರಾಯಣ ರಾವ್

ಶ್ರೀ ಕಾಳಿಕಾಂಬಾ ಯಕ್ಷಗಾನ ಕಲಾಸೇವಾ ಸಂಘದ ಸ್ಥಾಪಕ ಅಧ್ಯಕ್ಷರಾಗಿ ಇಂದಿನವರೆಗೂ ಸಕ್ರಿಯವಾಗಿ ಕಲಾಸೇವೆಯಲ್ಲಿ ನಿರತರಾಗಿರುವ ಶ್ರೀಯುತ ಹೆಚ್. ನಾರಾಯಣ ರಾವ್ ಸರಳ ಸಜ್ಜನಿಕೆಯ ವ್ಯಕ್ತಿ.

ಮಂಗಳೂರಿನ ಕುಳ್ಯಾಯಲ್ಲಿ ಹುಟ್ಟಿದ ಇವರು 1972 ರಿಂದ ಉಪ್ಪಿನಂಗಡಿಯ ಅರ್ತಿಲ ಎಂಬಲ್ಲಿ ವಾಸ್ತವ್ಯವಿದ್ದಾರೆ. ವಿದ್ಯಾಭ್ಯಾಸ ಮತ್ತು ಉದ್ಯೋಗದ ನಿಮಿತ್ತ ಜಿಲ್ಲೆಯ ವಿವಿದೆಡೆಗಳಲ್ಲಿ ನೆಲೆಸಿದ ಇವರು ಸ್ವಭಾವತಃ ಸ್ನೇಹಜೀವಿ.

ವೃತ್ತಿಯಲ್ಲಿ ಕೃಷಿಕರಾದ ಇವರು ಪ್ರವೃತ್ತಿಯಲ್ಲಿ ಕವಿಯಾಗಿ, ಲೇಖಕರಾಗಿ, ಅರ್ಥಧಾರಿಯಾಗಿ ತಮ್ಮದೇ ಸ್ವಂತಿಕೆಯನ್ನು ಮೆರೆದಿದ್ದಾರೆ. ಅರ್ಥಧಾರಿಯಾಗಿ ಎಲ್ಲಾ ಬಗೆಯ ಪಾತ್ರಗಳನ್ನೂ ಸಮರ್ಥವಾಗಿ ನಿರ್ವಹಿಸಬಲ್ಲ ಇವರ ಕಥೆ, ಕವನ, ಲೇಖನಗಳು ನಾಡಿನಾದ್ಯಂತ ಹಲವಾರು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ.

ಬೆಂಗಳೂರು ಆಕಾಶವಾಣಿ ಕೇಂದ್ರದ ಆಹ್ವಾನದ ಮೇರೆಗೆ -"ಕಾವ್ಯ ದೀಪ್ತಿ" ಕಾರ್ಯಕ್ರಮದಲ್ಲಿ ಭಾಗವಹಿಸಿದ ಇವರು ತಾನೊಬ್ಬ ಸಮರ್ಥಕವಿ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ.

ಉತ್ತಮ ಲೇಖಕರಾಗಿ ಜನಪ್ರಿಯರಾದ 52ರ ಹರೆಯದಲ್ಲೂ 25ರ ಯುವಕನಂತೆ ಕಾರ್ಯನಿರ್ವಹಿಸಬಲ್ಲ ಪಾದಸರದ ವ್ಯಕ್ತಿತ್ವವುಳ್ಳ ಇವರ ಪ್ರತಿಭೆ ಇದೀಗ ಯಕ್ಷಗಾನ ಕೃತಿಯ ರೂಪದಲ್ಲಿ ಬೆಳಕು ಕಾಣುತ್ತಿದೆ. ಸಂಘದ ರಜತ ವರ್ಷಾಚರಣೆಯ ಸಂದರ್ಭದಲ್ಲಿ ನಮಗಿದು ಹೆಮ್ಮೆಯ ವಿಚಾರ.

ಇವರ ಚೊಚ್ಚಲ ಕೃತಿ ಯಕ್ಷಗಾನ "ಅಮರಸೇನಾಧಿಪತ್ಯ" ವು ಜನಮನ್ನಣೆಗೆ ಪಾತ್ರವಾಗುತ್ತದೆ ಎಂಬ ಭರವಸೆ ನಮಗಿದೆ ಇವರ ಲೇಖನದಿಂದ ಇನ್ನು ಮುಂದೆಯೂ ಇಂತಹ ಉತ್ತಮ ಕೃತಿಗಳು ಮೂಡಿಬರಲಿ ಎಂಬುದು ನಮ್ಮ ಹಾರೈಕೆ.

ಉಪ್ಪಿನಂಗಡಿ
3-1-2000

ದಿವಾಕರ್ ಗೇರುಕಟ್ಟೆ
ಸಂಚಾಲಕರು
ರಜತೋತ್ಸವ ಸಮಿತಿ ಪ್ರಕಾಶನ

ಮುದ್ರಣ: ಶ್ರೀನಿಧಿ ಆಫ್‌ಸೆಟ್ ಪ್ರಿಂಟರ್ಸ್, ಪುತ್ತೂರು